
ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸಪತ್ರಿಕೆ

ಸಂಪುಟ : 7 । ಸಂಚಿಕೆ : 2 । ಫೆಬ್ರವರಿ-2025 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ



## ನಾಡಿನ ಸಮಸ್ತ ಸಹಕಾರಿ ಬಂಧುಗಳಿಗೆ ಮಹಾಶಿವರಾತ್ರಿ ಹಬ್ಬದ ಶುಭಾಶಯಗಳು



## ಕೇಂದ್ರ ಬಜೆಟ್ – 2025–26

## ಬಜೆಟ್‌ಗಾತ್ರ – 50.65 ಲಕ್ಷ ಕೋಟಿ ರೂ.

- 12.75 ಲಕ್ಷ ವರೆಗಿನ ಆದಾಯಕ್ಕಿಲ್ಲ ತೆರಿಗೆ
- ಕಿಸಾನ್ ಕ್ರೆಡಿಟ್‌ಕಾರ್ಡ್ ಸಾಲ 5 ಲಕ್ಷ ರೂ.ಗೆ ಏರಿಕೆ
- ಧಾನ್ಯ ಸ್ವಾವಲಂಬನೆಗೆ ಯೋಜನೆ
- 22 ಲಕ್ಷ ಉದ್ಯೋಗ ಸೃಷ್ಟಿಗೆ ಆದ್ಯತೆ
- ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಿಕೆ ಘೋಷಣೆ

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
# ಇದರ ನೂತನ ಆಡಳಿತಮಂಡಳಿ



ಸಿ.ಎಂ. ಮಾರೇಗೌಡ
ಗ್ರೂಪ್–1



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಗ್ರೂಪ್–1



ಎಂ.ಜೆ. ನರೇಂದ್ರಕುಮಾರ
ಗ್ರೂಪ್–1



ಕೆ. ಕೃಷ್ಣಮೂರ್ತಿ
ಗ್ರೂಪ್–1



ಡಾ. ನಾಗೇಂದ್ರ ಡಿ.ಎಲ್.
ಗ್ರೂಪ್–1



ವೈ. ಶ್ರೀನಿವಾಸಗೌಡ
ಗ್ರೂಪ್–1



ಡಾ. ಬಿ.ಡಿ. ಭೂಕಾಂತ
ಗ್ರೂಪ್–2



ಜಿ. ಮಲ್ಲಿಕಾರ್ಜುನಯ್ಯ
ಗ್ರೂಪ್–2



ಜಗದೀಶ ಕಂದಿಕರೆ
ಗ್ರೂಪ್–2



ರಾಜೇಶ್ ಟಿ.
ಗ್ರೂಪ್–2



ಡಾ. ಸಂಜಯ ಪಂ. ಹೊಸಮಠ
ಗ್ರೂಪ್–3



ತಮ್ಮಣ್ಣ ಬಿ. ಕೆಂಚರಡ್ಡಿ
ಗ್ರೂಪ್–3



ಉಮೇಶ ಶಿ. ಬಾಳಿ
ಗ್ರೂಪ್–3



ಧರೇಪ್ಪ ಎಂ. ಆಲಗೂರ
ಗ್ರೂಪ್–4



ಹೊನ್ನಯ್ಯ ವಿ. ಹಿರೇಮಠ
ಗ್ರೂಪ್–4



ರವೀದ್ರ ಪ್ರಲ್ಹಾದ ಕಲಬುರ್ಗಿ
ಗ್ರೂಪ್–4



ಶಿವಕುಮಾರ ಬಸವರಾಜು ಬಾದವಾಡಗಿ
ಗ್ರೂಪ್–4



ಶಿವಾನಂದ ಬಸಪ್ಪ ನ್ಯಾಮಗೌಡ
ಗ್ರೂಪ್–4



ಎಸ್. ಚಂದ್ರಶೇಖರ್
ಗ್ರೂಪ್–5



ಹೆಚ್. ಅಶೋಕ್
ಗ್ರೂಪ್–5



ಚಂದ್ರಶೇಖರ್ ಕೋಲ್ಚಾರು
ಗ್ರೂಪ್–5

## ಸಹಕಾರ ಸಚಿವ ಕೆ.ಎನ್. ರಾಜಣ್ಣ ರವರಿಂದ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಪ್ರಗತಿ ಪರಿಶೀಲನಾ ಸಭೆ



**ಉಡುಪಿ :** ದಿನಾಂಕ : 11/1/2025ರಂದು ಉಡುಪಿಯಲ್ಲಿ ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ರವರು ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ಸಹಕಾರ ಇಲಾಖೆ ಮತ್ತು ಲೆಕ್ಕಪರಿಶೋಧನಾ ಇಲಾಖೆ ಅಧಿಕಾರಿಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಸಭೆಯಲ್ಲಿ ಇಲಾಖೆಯ ಪ್ರಮುಖ ವಿಚಾರಗಳ ಬಗ್ಗೆ ಹಾಗೂ ಸರ್ಕಾರದ ಯೋಜನೆಗಳ ಪರಿಣಾಮಕಾರಿ ಅನುಷ್ಠಾನದ ಕುರಿತು ಸಚಿವರು ಸಲಹೆ ನೀಡಿದರು. ನಂತರ ಸಹಕಾರ ಸಚಿವರು ಜಿಲ್ಲೆಯ ಸಹಕಾರ ಮುಖಂಡರುಗಳ ಜತೆ ಚರ್ಚಿಸಿದರು.

ಸಹಕಾರ ಸಚಿವರ ವಿಶೇಷಾಧಿಕಾರಿ ಜಿ.ಎಸ್. ರಮಣರೆಡ್ಡಿ, ಮೈಸೂರು ಪ್ರಾಂತ್ಯ ಜಂಟಿ ನಿಬಂಧಕರಾದ ಪ್ರಸಾದ್ ರೆಡ್ಡಿ, ಸಹಕಾರ ಮಹಾಮಂಡಳದ ನಿರ್ದೇಶಕರು ಹಾಗೂ ಉಡುಪಿ ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ಜಯಕರಶೆಟ್ಟಿ ಇಂದ್ರಾಳಿ, ಸಹಕಾರಿ ಮುಖಂಡರುಗಳು ಸೇರಿದಂತೆ ಉಪನಿಬಂಧಕರುಗಳು ಹಾಗೂ ಇಲಾಖೆಯ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ರಾಜ್ಯ ಮಟ್ಟದ ತರಬೇತಿ ಕಾರ್ಯಕ್ರಮ : ಸಹಕಾರ ಸಂಸ್ಥೆಗಳು ನಂಬಿಕೆ, ವಿಶ್ವಾಸದಲ್ಲಿ ಕಾರ್ಯನಿರ್ವಹಿಸಲು ಶಾಸಕ ಕೆ. ಗೋಪಾಲಯ್ಯ ಸಲಹೆ




**ಬೆಂಗಳೂರು :** ಸಹಕಾರ ಸಂಘಗಳ ಅಸ್ತಿತ್ವ ಇಂದು ವಿಶ್ವಾಸದ ಮೇಲೆ ನಿಂತಿದೆ. ಸಹಕಾರಿಗಳು ಒಟ್ಟಾಗಿ ಕೆಲಸ ಮಾಡಿದರೆ ಮಾತ್ರ ಸಹಕಾರ ಕ್ಷೇತ್ರದ ಉಳಿವು ಸಾಧ್ಯ. ಸಹಕಾರ ಸಂಘಗಳು ಉಳಿದರೆ ಮಾತ್ರ ಬಡವರು, ರೈತರು, ಮಹಿಳೆಯರು ಸಮಾಜದಲ್ಲಿ ಆರ್ಥಿಕವಾಗಿ ಶಕ್ತರಾಗಲು ಸಾಧ್ಯ. ಯಾವುದೇ ಸಂಘದಲ್ಲಿ ಆಡಳಿತ ಮಂಡಳಿ ದಾರಿ ತಪ್ಪಿದರೆ ಆ ಸಂಘದ ವಿನಾಶ ಆದಂತೆ. ಇವತ್ತಿನ ದಿನಗಳಲ್ಲಿ ಸಾಮಾನ್ಯ ಜನರು ರಾಷ್ಟ್ರೀಕೃತ ಬ್ಯಾಂಕಿಗೆ ಹೋಗಿ ಸಾಲ ಪಡೆಯುವುದು ಅಸಾಧ್ಯ. ಸಹಕಾರ ಸಂಘಗಳು ರಾಷ್ಟ್ರೀಕೃತ ಬ್ಯಾಂಕಿಗೆ ಸಮನಾಗಿ ಕೆಲಸ ಮಾಡುತ್ತಿವೆ ಎಂದು ಶಾಸಕರಾದ ಕೆ. ಗೋಪಾಲಯ್ಯರವರು ಹೇಳಿದರು.

ಅವರು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಿದ್ದ ಬೆಂಗಳೂರು ನಗರ ಜಿಲ್ಲೆಯ ಪತ್ತಿನ ಸಹಕಾರ ಸಂಘಗಳ ಮುಖ್ಯಕಾರ್ಯನಿರ್ವಾಹಕರು ಮತ್ತು ಸಿಬ್ಬಂದಿಗಳಿಗೆ ಏರ್ಪಡಿಸಿದ್ದ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಕೆ.ಎಸ್. ನವೀನ್ ರವರು ಮಾತನಾಡಿ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳವು ರಾಜ್ಯ ಸಹಕಾರ ಸಂಘಗಳ ಮಾತೃ ಸಂಸ್ಥೆಯಾಗಿದ್ದು, ರಾಜ್ಯದ 30 ಜಿಲ್ಲಾ ಸಹಕಾರ ಯೂನಿಯನ್‌ಗಳ ಮೂಲಕ ಸಹಕಾರ ಶಿಕ್ಷಣ, ತರಬೇತಿ ಹಾಗೂ ಪ್ರಚಾರದ ಕೆಲಸಗಳನ್ನು ಕಳೆದ 100 ವರ್ಷಗಳಿಂದ ಪರಿಣಾಮಕಾರಿಯಾಗಿ ನಡೆಸಿಕೊಂಡು ಬರುತ್ತಿದೆ. ಮಹಾಮಂಡಳ 54 ವರ್ಷಗಳಿಂದ ನಿರಂತರವಾಗಿ ದೇಶದಲ್ಲಿ ಏಕೈಕ ಸಹಕಾರ ವಾರಪತ್ರಿಕೆಯನ್ನು ಪ್ರಕಟಿಸುತ್ತಿದೆ. ಮಹಾಮಂಡಳ ರಾಜ್ಯದ ಸಹಕಾರ ಚಳವಳಿಯ ಪ್ರಗತಿಗೆ ತನ್ನದೇ ಆದ ವಿಶೇಷ ಕೊಡುಗೆ ನೀಡುತ್ತಿದೆ ಎಂದರು.

ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರಾದ ಹೆಚ್.ಎಸ್. ನಾಗರಾಜಯ್ಯ, ಇವರು "ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ವಸೂಲಾತಿ ಹಾಗೂ ಕಾನೂನು ಕ್ರಮಗಳು, ಋಣಾತ್ಮಕ ಸಾಲ" ವಿಷಯ ಕುರಿತು, ಸ್ವಾರ್ ವೆಂಕಟೇಶ್, ರಾಜ್ಯ ತರಬೇತಿದಾರರು ಬೆಂಗಳೂರು ಇವರು "ಒತ್ತಡ ನಿರ್ವಹಣೆ ಮತ್ತು ಸಂವಹನ" ಕುರಿತು ಚಾರ್ಟಡ್ ಅಕೌಂಟೆಂಡ್ ಅನಿಲ್ ಭಾರದ್ವಾಜ್ "ಸರಕು ಸೇವಾ ತೆರಿಗೆ (ಜಿ.ಎಸ್.ಟಿ) ಮತ್ತು ಆದಾಯ ತೆರಿಗೆ" ವಿಷಯ ಕುರಿತು ಉಪನ್ಯಾಸ ನೀಡಿದರು. ಒಕ್ಕೂಟದ ಉಪಾಧ್ಯಕ್ಷರಾದ ಕೃಷ್ಣಪ್ಪ ಕೆ.ಸಿ, ನಿರ್ದೇಶಕರಾದ ಶ್ರೀನಿವಾಸಗೌಡ ವೈ ರವರು ಉಪಸ್ಥಿತರಿದ್ದರು. ನಿರ್ದೇಶಕರಾದ ಕೆ.ಎಸ್. ಚಾಮರಾಜುರವರು ಎಲ್ಲರನ್ನು ಸ್ವಾಗತಿಸಿದರೆ, ಹೆಚ್.ಟಿ. ನಾಗೇಶ್ ವಂದನಾರ್ಪಣೆ ಮಾಡಿದರು.

**SAHAKARA VARTHA PATHRIKE KANNADA MONTHLY**
RNI-Reg No. KARKAN/2018/75796
Post Reg No. KA-BGW/1816/2022-24
Posting Date : 1 and 5 Every Month
Posted at : P/C RMS Bhavan, Bangalore PSO,
Blore-26 Published On : 31st of Previous Month
License to post without prepayment
PMG BG/WPP-405/2022-2024




ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ
ಬೆಂಗಳೂರು ನಂ. 126 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096

Printed at : Biligiri Printers
Chamrajpet, Bengaluru - 18

## ಸಂಪಾದಕೀಯ



ವಿ. ರಾಜು
ಅಧ್ಯಕ್ಷರು

ಜನರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗ್ರತಿ ಮೂಡಿಸಿ, ಸಾರ್ವಜನಿಕರು ಸಹಕಾರ ಸಂಸ್ಥೆಗಳಲ್ಲಿ ಸದಸ್ಯರಾಗಿ ಯೋಗ್ಯ ಬಡ್ಡಿದರದಲ್ಲಿ ಸಾಲ ಪಡೆಯಲು ಹಾಗೂ ಆರ್ಥಿಕ ಸ್ವಾವಲಂಬನೆಗೆ ಉತ್ತಮ ಕ್ಷೇತ್ರವಾಗಿದೆ. ಈ ನಿಟ್ಟಿನಲ್ಲಿ ಹೆಚ್ಚು ಸಹಕಾರ ಸಂಘಗಳು ಸ್ಥಾಪನೆಗೊಂಡು ಪರಿಣಾಮಕಾರಿ ಸೇವೆ ನೀಡುವುದು ಅಗತ್ಯವಾಗಿದೆ.

# ಮೈಕ್ರೋ ಫೈನಾನ್ಸ್‌ಗೆ ಕಡಿವಾಣ ಅಗತ್ಯ
# ಸಹಕಾರ ಸಂಘಗಳ ಸೇವೆ ವಿಸ್ತರಣೆಯಾಗಲಿ

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಮೈಕ್ರೋ ಫೈನಾನ್ಸ್ ಹಾವಳಿ ಹೆಚ್ಚಾಗುತ್ತಿದೆ. ನೋಂದಣಿಯಾಗದ ಹಣಕಾಸು ಸಂಸ್ಥೆಗಳು ಅಧಿಕ ಬಡ್ಡಿದರದಲ್ಲಿ ಸಾಲ ವಿತರಣೆ ಮಾಡಿ, ಸಕಾಲದಲ್ಲಿ ಸಾಲ ಮರುಪಾವತಿ ಮಾಡದ ಜನರಿಗೆ ಕಿರುಕುಳ ನೀಡಿ, ಜನರನ್ನು ಸಂಕಷ್ಟಕ್ಕೆ ದೂರು ಮಾಡಿದ್ದಾರೆ. ಇದರಿಂದ ಹಲವು ಜನರು ಆತ್ಮಹತ್ಯೆ ಮಾಡಿ ಕೊಂಡಿರುವುದು, ಆತ್ಮಹತ್ಯೆ ಪ್ರಯತ್ನ ಸೇರಿದಂತೆ ಊರು ಬಿಡುವ ಪರಿಸ್ಥಿತಿ ಉಂಟಾಗಿದೆ.

ರಾಜ್ಯ ಸರ್ಕಾರ ಈ ಕುರಿತು ಕಾನೂನು ರೂಪಿಸಿ ಸುಗ್ರೀವಾಜ್ಞೆ ತರಲು ಸಜ್ಜಾಗಿದೆ. ಮುಂದಿನ ವಿಧಾನಸಭೆ ಅಧಿವೇಶನದಲ್ಲಿ ಮೈಕ್ರೋಫೈನಾನ್ಸ್ ತಡೆಗೆ ಕಾನೂನು ರೀತಿ ಮಸೂದೆ ಮೂಲಕ ಕಡಿವಾಣ ಹಾಕಲಿದೆ. ಇವೆಲ್ಲವುಗಳ ನಡುವೆ ಗ್ರಾಮೀಣ–ನಗರ ಪ್ರದೇಶದ ಜನರಿಗೆ ಸಹಕಾರ ಸಂಸ್ಥೆಗಳು ವಿವಿಧ ರೀತಿಯ ಸಾಲಗಳನ್ನು ನೀಡಿ ಆರ್ಥಿಕ ಸ್ವಾವಲಂಬನೆಗೆ ನೇರವಾಗುತ್ತಿದೆ.

ಜನರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ಜಾಗ್ರತಿ ಮೂಡಿಸಿ, ಸಾರ್ವಜನಿಕರು ಸಹಕಾರ ಸಂಸ್ಥೆಗಳಲ್ಲಿ ಸದಸ್ಯರಾಗಿ ಯೋಗ್ಯ ಬಡ್ಡಿದರದಲ್ಲಿ ಸಾಲ ಪಡೆಯಲು ಹಾಗೂ ಆರ್ಥಿಕ ಸ್ವಾವಲಂಬನೆಗೆ ಉತ್ತಮ ಕ್ಷೇತ್ರವಾಗಿದೆ. ಈ ನಿಟ್ಟಿನಲ್ಲಿ ಹೆಚ್ಚು ಸಹಕಾರ ಸಂಘಗಳು ಸ್ಥಾಪನೆಗೊಂಡು ಪರಿಣಾಮಕಾರಿ ಸೇವೆ ನೀಡುವುದು ಅಗತ್ಯವಾಗಿದೆ.

ಇತ್ತೀಚೆಗೆ ಪತ್ತಿನ ಮಹಾಮಂಡಳದ ಆಡಳಿತ ಮಂಡಳಿಗೆ ಚುನಾವಣೆ ನಡೆದು ನಿರ್ದೇಶಕರುಗಳು ಆಯ್ಕೆಯಾಗಿದ್ದಾರೆ. ಎಲ್ಲ ನಿರ್ದೇಶಕರುಗಳು ಮುಂಬರುವ ದಿನಗಳಲ್ಲಿ ಪತ್ತಿನ ಮಹಾಮಂಡಳವನ್ನು ಆರ್ಥಿಕವಾಗಿ ಪರಿಣಾಮಕಾರಿಯಾಗಿ ಮುನ್ನಡೆಸಲು ಎಲ್ಲ ಸಹಕಾರಿಗಳ ಅಗತ್ಯವಿದೆ. ಪರಿಣಾಮಕಾರಿ ಯೋಜನೆಗಳು – ತರಬೇತಿ – ಶಿಕ್ಷಣಕ್ಕೆ ಆದ್ಯತೆ ನೀಡಬೇಕಾಗಿದೆ. ಕಳೆದ ಆಡಳಿತ ಮಂಡಳಿಗೆ ಸಹಕಾರ ನೀಡಿ ಪ್ರೋತ್ಸಾಹಿಸಿರುವ ಎಲ್ಲ ಸಹಕಾರಿ ಬಂಧುಗಳಿಗೆ ಧನ್ಯವಾದಗಳು.

ಫೆಬ್ರವರಿ ಮಾಹೆಯಲ್ಲಿ ಮಹಾಶಿವರಾತ್ರಿ ಆಚರಣೆ ನಡೆಯಲಿದೆ. ಸಹಕಾರಿ ಬಂಧುಗಳಿಗೆ "ಮಹಾಶಿವರಾತ್ರಿಯ" ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 126, 1ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ ಜೆಬಿ ಕಾವಲ್,
ರಾಜೀವ್‌ಗಾಂಧಿ ನಗರ, ನಂದಿನಿ ಲೇಔಟ್, ಬೆಂಗಳೂರು–560096
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀ ವಿ. ರಾಜು**
ಕಾರ್ಯನಿರ್ವಾಹಕ ಸಂಪಾದಕರು:
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ**
ಸದಸ್ಯರು : **ಡಾ|| ಸಂಜಯ ಪಿ. ಹೊಸಮಠ**
**ಶ್ರೀ ಎಂ.ಜೆ. ನರೇಂದ್ರಕುಮಾರ**
**ಶ್ರೀ ಕೆ. ಕೃಷ್ಣಮೂರ್ತಿ**
**ಶ್ರೀ ಡಿ.ಆರ್. ನಾಗೇಶಪ್ಪ**
**ಶ್ರೀ ಹೊನ್ನಯ್ಯ ವೀ ಹಿರೇಮಠ**
**ಶ್ರೀ ಚಿತ್ತರಂಜನ್ ಬೋಳಾರ್**
ಸಂಪಾದಕರು :
**ಪ್ರಜ್ವಲ್ ಕೆ.ಎನ್.**
ಮುಖ್ಯಕಾರ್ಯನಿರ್ವಹಣಾಧಿಕಾರಿ

# ಸಹಕಾರ ಇಲಾಖೆ ಪತ್ರಾಂಕಿತ ಅಧಿಕಾರಿಗಳ ಒಕ್ಕೂಟದ ಡೈರಿ ಬಿಡುಗಡೆ



**ಬೆಂಗಳೂರು:** ಸಹಕಾರ ಇಲಾಖೆಯ ರಾಜ್ಯ ಪತ್ರಾಂಕಿತ ಅಧಿಕಾರಿಗಳ ಸಂಘದ 2025ರ ಸಾಲಿನ ದಿನಚರಿಯನ್ನು ಸಹಕಾರ ಸಚಿವರಾದ ಕೆ.ಎನ್. ರಾಜಣ್ಣ ಅವರು ಬಿಡುಗಡೆ ಮಾಡಿದರು ಹಾಗೂ ಹೊಸ ವರ್ಷದ ಶುಭಾಶಯ ತಿಳಿಸಿದರು. ಈ ಸಂದರ್ಭದಲ್ಲಿ ಸಹಕಾರ ಸಂಘಗಳ ನಿಬಂಧಕರಾದ ಟಿ.ಎಚ್.ಎಂ. ಕುಮಾರ್, ಸಹಕಾರ ಸಚಿವರ ವಿಶೇಷಾಧಿಕಾರಿ ಜಿ.ಎಸ್. ರಮಣರೆಡ್ಡಿ, ಅಧಿಕಾರಿಗಳ ಸಂಘದ ಅಧ್ಯಕ್ಷರಾದ ಎ.ಸಿ. ದಿವಾಕರ್, ಯಶಸ್ವಿನಿ ಟ್ರಸ್ಟ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಎಂ. ವೆಂಕಟಸ್ವಾಮಿ, ಅಪರ ನಿಬಂಧಕರುಗಳಾದ ಕೆ.ಎಸ್. ನವೀನ್, ಹೆಚ್. ಬಾಲಶೇಖರ್, ಬಿ.ಆರ್. ಲಿಂಗರಾಜು, ಜಂಟಿ ನಿಬಂಧಕರುಗಳಾದ ಅಶ್ವಥನಾರಾಯಣ್, ಕಲ್ಲಪ್ಪ ಓಬಣ್ಣಗೋಳ, ಎಂ. ವೆಂಕಟೇಶ್, ಪಿ. ಮಹೇಶ್, ಯಶಸ್ವಿನಿ ಸೇರಿದಂತೆ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಸುಭಾಷಿತ :** ಬೆಚ್ಚನೆ ಮನೆ ಇರಲು ವೆಚ್ಚಕೆ ಹೊನ್ನಿರಲು ಇಚ್ಚೆಯನರಿವ ಸತಿಯಿರಲು ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ – ಸರ್ವಜ್ಞ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1770/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# 2025-26ರ ಕೇಂದ್ರ ಬಜೆಟ್ ಗಾತ್ರ 50.65 ಲಕ್ಷ ಕೋಟಿ ರೂ.

## ಕೃಷಿಗೆ ರೂ. 1.27 ಲಕ್ಷ ಕೋಟಿ, ರಸಗೊಬ್ಬರ ಸಬ್ಸಿಡಿ 1.67 ಲಕ್ಷ ಕೋಟಿ ಮಧ್ಯಮ ವರ್ಗಕ್ಕೆ ಆರ್ಥಿಕ ಚೈತನ್ಯ

**ನವದೆಹಲಿ** : ಬೆಲೆ ಏರಿಕೆಯಿಂದ ತತ್ತರಿಸಿ ಮನೆ ವಾರ್ತೆಯ ಖರ್ಚುಗಳನ್ನು ನಿಭಾಯಿಸಲು ಎದುಸಿರು ಬಿಡುತ್ತಿದ್ದ ಮಧ್ಯಮ ವರ್ಗದ ಜನರು ನಿರಾಳರಾಗುವಂತೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಆದಾಯ ತೆರಿಗೆ ವಿನಾಯಿತಿಯ ಮಿತಿಯನ್ನು ಏರಿಸಿದೆ. ಸಂಬಳ ಪಡೆಯುವ ವ್ಯಕ್ತಿಗೆ ರೂ. 12.75 ಲಕ್ಷದವರೆಗೆ ಹೊಸ ತೆರಿಗೆ ಪದ್ಧತಿಯಡಿ ಯಾವುದೇ ತೆರಿಗೆ ಇರುವುದಿಲ್ಲ ಎಂದು ಪ್ರಕಟಿಸುವ ಮೂಲಕ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಜನರಲ್ಲಿ 'ಸುಖಾನುಭವ' ಮೂಡಿಸಿದ್ದಾರೆ. ಮಧ್ಯಮ ವರ್ಗದವರು, ಅದರಲ್ಲೂ ನೌಕರಿದಾರರೇ ಆದ್ಯತೆಯಾಗಿದ್ದಾರೆ. ಆದರೆ, ಕೃಷಿ, ಗ್ರಾಮೀಣಾಭಿವೃದ್ಧಿ, ಶಿಕ್ಷಣ, ಆರೋಗ್ಯದಂತಹ ಮಹತ್ವದ ಕ್ಷೇತ್ರಗಳಿಗೆ ಅನುದಾನ ಕಡಿಮೆ ಮಾಡಿದ್ದಾರೆ.

'ಎಲ್ಲ ಪ್ರದೇಶಗಳ ಸಮತೋಲಿತ ಅಭಿವೃದ್ಧಿಯ ಮೂಲಕ ಎಲ್ಲರ ಪ್ರಗತಿಯನ್ನು ಸಾಕಾರಗೊಳಿಸುವ ವಿಶಿಷ್ಟ ಅವಕಾಶವಾಗಿ ಮುಂದಿನ ಐದು ವರ್ಷಗಳನ್ನು ನೋಡುತ್ತೇವೆ' ಎಂದು ನಿರ್ಮಲಾ ಅವರು ಬಜೆಟ್‌ನಲ್ಲಿ ಹೇಳಿದ್ದಾರೆ. ಬಜೆಟ್ ಭಾಷಣದ ಆರಂಭದಲ್ಲಿಯೇ, ಆರ್ಥಿಕ ಪ್ರಗತಿಯ ಎಂಜಿನ್‌ಗಳಲ್ಲಿ ಕೃಷಿಯು ಮೊದಲನೆಯದು ಎಂದಿದ್ದಾರೆ.

ಆದರೆ, 2025–26ನೇ ಸಾಲಿನಲ್ಲಿ ಕೃಷಿ ರೂ. 1.27 ಲಕ್ಷ ಕೋಟಿ ಮೀಸಲಿರಿಸಿದ್ದಾರೆ. 2024–25ರಲ್ಲಿ ಈ ಮೊತ್ತವು ರೂ. 1.31 ಲಕ್ಷ ಕೋಟಿ ಇತ್ತು. ರಸಗೊಬ್ಬರ ಸಹಾಯಧನವು ರೂ. 1.71 ಲಕ್ಷ ಕೋಟಿಯಿಂದ ರೂ. 1.67 ಲಕ್ಷ ಕೋಟಿಗೆ ಇಳಿಕೆಯಾಗಿದೆ.

ಬೆಳೆ ಸಂಬಂಧಿ ಅನುದಾನದಲ್ಲಿ 38,129 ಕೋಟಿ, ಗ್ರಾಮೀಣ ರಸ್ತೆ ಮತ್ತು ಸೇತುವೆಗೆ 16,057 ಕೋಟಿ, ಬೆಳೆವಿಮೆಗೆ ರೂ. 3,622 ಕೋಟಿ ಅನುದಾನವನ್ನು ಕಳೆದ ಬಜೆಟ್‌ಗೆ ಹೋಲಿಸಿದರೆ ಕಡಿತ ಮಾಡಲಾಗಿದೆ. ಇದು, ಬಜೆಟ್‌ನ ಸುಳಿವನ್ನು ನೀಡುತ್ತದೆ.


'ತೆರಿಗೆ ವಿನಾಯಿತಿಯ ನಿರ್ಧಾರದಿಂದ ಹೊಸ ತೆರಿಗೆ ಪದ್ಧತಿಯಲ್ಲಿ ರೂ. 12 ಲಕ್ಷ ಆದಾಯ ಹೊಂದಿರುವ ತೆರಿಗೆ ಪಾವತಿದಾರರಿಗೆ 80,000 ಉಳಿತಾಯ ಆಗಲಿದೆ ಎಂದು ಸಚಿವರು ತಿಳಿಸಿದ್ದಾರೆ. ಆದರೆ, ಸರ್ಕಾರದ 'ಭರ್ಜರಿ' ಘೋಷಣೆಯಿಂದ ರೂ. 12.75 ಲಕ್ಷಕ್ಕಿಂತ ಹೆಚ್ಚಿನ ಆದಾಯ ಹೊಂದಿರುವವರಿಗೆ ಭಾರಿ ಅನುಕೂಲವೇನೂ ಆಗುವುದಿಲ್ಲ.

ದೇಶದ ಆರ್ಥಿಕ ಸ್ಥಿತಿ ಆಶಾದಾಯಕವಾಗಿಲ್ಲ. ಉದ್ಯೋಗಾವಕಾಶಗಳು



ಕಡಿಮೆಯಾಗುತ್ತಿವೆ. ಅತ್ಯಾಕರ್ಷಕ ಹೆಸರಿನ ಯೋಜನೆಗಳ ಮಹಾಪೂರದ ನಡುವೆಯೂ ಅಭಿವೃದ್ಧಿ ಚಟುವಟಿಕೆಗಳು ವೇಗ ಪಡೆದುಕೊಳ್ಳುತ್ತಿಲ್ಲ. ಈ ಸಲವೂ ಬಜೆಟ್‌ನಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಭಾರಿ – ಉತ್ತೇಜನ ನೀಡಿಲ್ಲ. ಹಲವು ಪ್ರಮುಖ ಇಲಾಖೆಗಳ ಅನುದಾನ ಪ್ರಮಾಣವನ್ನು ಸದ್ದಿಲ್ಲದೆ ಕಡಿತಗೊಳಿಸಲಾಗಿದೆ. ದೇಶದ ಸಾಲ ಪ್ರಮಾಣವು ಏರುಮುಖದಲ್ಲಿ ಸಾಗಿದೆ. ಈ ಎಲ್ಲ ಸಮಸ್ಯೆಗಳಿಗೆ ಮದ್ದು ಹುಡುಕುವಂತಹ ನೀಲನಕ್ಷೆಗಳು ಬಜೆಟ್‌ನಲ್ಲಿ ಕಂಡುಬರಲಿಲ್ಲ.

ಸರಳವಾದ ಹೊಸ ಆದಾಯ ತೆರಿಗೆ ಮಸೂದೆಯನ್ನು ಮುಂದಿನ ವಾರ ಪರಿಚಯಿಸುವುದಾಗಿ ಸಚಿವರು ಈ ವೇಳೆ ಪ್ರಕಟಿಸಿದರು. ಹಿರಿಯ ನಾಗರಿಕರ ತೆರಿಗೆ ಕಡಿತ ಮಿತಿ ರೂ. 50,000 ರಿಂದ ರೂ. 1 ಲಕ್ಷಕ್ಕೆ ಏರಿಸುವುದಾಗಿ ಹೇಳಿದರು. ಬಾಡಿಗೆ ಮೇಲಿನ ಟಿಡಿಎಸ್‌ನ ವಾರ್ಷಿಕ




6ನೇ ಪುಟಕ್ಕೆ...

# ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಪತ್ರಕರ್ತರ ಸಹಕಾರ ಸಂಘದ ಕ್ಯಾಲೆಂಡರ್ ಬಿಡುಗಡೆ



**ಬೆಂಗಳೂರು** : ಕರ್ನಾಟಕ ಪತ್ರಕರ್ತರ ಸಹಕಾರ ಸಂಘದಿಂದ ವಿಶಿಷ್ಟವಾಗಿ ಹೊರತಂದಿರುವ 2025ರ ಕ್ಯಾಲೆಂಡರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಕ್ರಾಂತಿ ಹಬ್ಬದ ದಿನದಂದು ಬೆಂಗಳೂರಿನಲ್ಲಿ ಬಿಡುಗಡೆ ಮಾಡಿದರು. ಮುಖ್ಯಮಂತ್ರಿ ಗೃಹ ಕಚೇರಿ ಕಾವೇರಿಯಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ರಕರ್ತರ ಸಹಕಾರ ಸಂಘಕ್ಕೆ 75 ವರ್ಷ ಪೂರೈಸಿರುವುದು ಹೆಗ್ಗಳಿಕೆ. ಪತ್ರಕರ್ತರ ಸಹಕಾರ ಸಂಘಕ್ಕೆ ಒಳ್ಳೆಯದಾಗಲಿ, ಸದಸ್ಯ ಸೇವೆಗಳನ್ನು ಮುಂದುವರೆಸುವಂತೆ ತಿಳಿಸಿದರು.

ಇದೇ ವೇಳೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಬೃಹತ್ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್, ಶಾಸಕ ರಘುಮೂರ್ತಿ, ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರರಾದ ಕೆ.ವಿ.ಪ್ರಭಾಕರ್ ಅವರುಗಳು ಪತ್ರಕರ್ತರ ಸಹಕಾರ ಸಂಘಕ್ಕೆ ಶುಭ ಹಾರೈಸಿದರು.

ಪತ್ರಕರ್ತರ ಸಹಕಾರ ಸಂಘದ ಅಧ್ಯಕ್ಷ ಎಂ.ರಮೇಶ್ ಪಾಳ್ಯ, ಉಪಾಧ್ಯಕ್ಷ ದೊಡ್ಡ ಬೊಮ್ಮಯ್ಯ, ಖಜಾಂಚಿ ಬಿ.ಮೋಹನ್ ಕುಮಾರ್, ವಿನೋದ್ ಕುಮಾರ್ ಬಿ. ನಾಯ್ಕ್, ರಮೇಶ್ ಹಿರೇಜಂಬೂರು, ಕೆ.ಪರಮೇಶ್ವರ್, ಆನಂದ್ ಬೈದನಮನೆ, ಪಿ.ಎಸ್. ಕೃಷ್ಣಕುಮಾರ್, ನಯನಾ ಸೇರಿದಂತೆ ಸಂಘದ ಎಲ್ಲ ನಿರ್ದೇಶಕರು, ಕಾರ್ಯದರ್ಶಿ ಕೆಂಪರಾಜು ಉಪಸ್ಥಿತರಿದ್ದರು.

...5ನೇ ಪುಟದಿಂದ

ರೂ. 2.40 ಲಕ್ಷದ ಮಿತಿಯನ್ನು ರೂ. 6 ಲಕ್ಷಕ್ಕೆ ಏರಿಸುವುದಾಗಿ ಘೋಷಿಸಿದರು. ಭೌಗೋಳಿಕ ರಾಜಕೀಯ ಅಡೆತಡೆಗಳಿಂದ ಉಂಟಾದ ಆರ್ಥಿಕ ಅನಿಶ್ಚಿತತೆಗಳ ನಡುವೆಯೂ ದೇಶದ ಬೆಳವಣಿಗೆ ಗತಿಯನ್ನು ಉತ್ತೇಜಿಸಲು ನಿರ್ಮಲಾ ಅವರು ದುಡಿಯುವ ವರ್ಗವನ್ನು ಓಲೈಸುವ ಎಚ್ಚರಿಕೆಯ ನಡೆ ಇಟ್ಟಿದ್ದಾರೆ. ದೆಹಲಿ ವಿಧಾನಸಭಾ ಚುನಾವಣೆಯ ಮತದಾನ ಬಾಗಿಲಿಗೆ ಬಂದು ನಿಂತಿರುವ ಹೊತ್ತಿನಲ್ಲಿ ದೊಡ್ಡ ಸಮುದಾಯವನ್ನು ಸಂತೃಪ್ತಗೊಳಿಸುವ ಸಚಿವರ 'ಮಧ್ಯಮ ಮಾರ್ಗ'ವು ಕಮಲ ಪಾಳಯಕ್ಕೆ ಇನ್ನಷ್ಟು ಚೈತನ್ಯ ನೀಡಲಿದೆ ಎಂದು ಅಂದಾಜಿಸಲಾಗಿದೆ.

2025–26ರ ಹಣಕಾಸು ವರ್ಷದಲ್ಲಿ ಮೊದಲ ಬಾರಿಗೆ ಕೇಂದ್ರ ಸರ್ಕಾರದ ಒಟ್ಟು ಖರ್ಚು ರೂ. 50 ಲಕ್ಷ ಕೋಟಿ ದಾಟಲಿದೆ ಎಂದು ಅಂದಾಜು ಮಾಡಲಾಗಿದೆ. ಅದರಲ್ಲಿ ರೂ. 11.21 ಲಕ್ಷ ಕೋಟಿ ಮೂಲಸೌಕರ್ಯ ಅಭಿವೃದ್ಧಿ ಮತ್ತು ದೀರ್ಘಾವಧಿಯ ಆಸ್ತಿ ಸೃಷ್ಟಿಗೆ ವೆಚ್ಚವಾಗಲಿದೆ. ಪ್ರಸ್ತುತ ಹಣಕಸು ವರ್ಷದಲ್ಲಿ ಕೇಂದ್ರ ಸರ್ಕಾರದ ಬಂಡವಾಳ ವೆಚ್ಚವು ಸುಮಾರು ರೂ. 1 ಲಕ್ಷ ಕೋಟಿ ಕಡಿಮೆಯಾಗುವ ಸಾಧ್ಯತೆಯಿದೆ. ವಿತ್ತೀಯ ಕೊರತೆಯನ್ನು 2026ಕ್ಕೆ ಜಿಡಿಪಿಯ ಶೇ.4.4ಕ್ಕೆ ನಿಗದಿಪಡಿಸಲಾಗಿದೆ ಎಂದು ಸಚಿವರು ತಿಳಿಸಿದರು.

ವಿತ್ತೀಯ ಕೊರತೆ ಕಡಿಮೆಗೊಳಿಸಿ ಬಂಡವಾಳ ವೆಚ್ಚವನ್ನು ಹೆಚ್ಚಿಸಿದರೆ ಆರ್ಥಿಕತೆ ಮೇಲೆ ಸಕಾರಾತ್ಮಕ ಪರಿಣಾಮ ಉಂಟಾಗಲಿದೆ. ಆದರೆ, ಈ ಸಲ ಅಂತಹ ಪ್ರಯತ್ನವೇನೂ 'ಕಂಡಿಲ್ಲ. ಕಲ್ಯಾಣ




ಯೋಜನೆಗಳ ಘೋಷಣೆಗಳ ಬಳಿಕವೂ ವಿತ್ತೀಯ ಕೊರತೆಯನ್ನು ಹದ್ದು ಮೀರಲು ಬಿಟ್ಟಿಲ್ಲ ಕಾರ್ಪೊರೇಟ್ ವಲಯದ ಸಮಾಧಾನ, ಜನಪ್ರಿಯ ಘೋಷಣೆಗಳಿಗೆ ಒತ್ತು ನೀಡಿರುವ ಈ ಅರ್ಥ ನೀತಿಯ ಒಳಿತು ಬಜೆಟ್ ಕೆಡುಕುಗಳ ಕುರಿತು ಹೆಚ್ಚು ತಲೆಕೆಡಿಸಿಕೊಂಡಿಲ್ಲ.

ನರೇಂದ್ರ ಮೋದಿ ಸರ್ಕಾರದ ಕನಸಿನ ಯೋಜನೆ ಜಲಜೀವನ್ ಮಿಷನ್ ಅನ್ನು 2028 ರೊಳಗೆ ಪೂರ್ಣಗೊಳಿಸಲಾಗುವುದು ಎಂದೂ ನಿರ್ಮಲಾ ಸೀತಾರಾಮನ್ ತಿಳಿಸಿದರು. ಜಲಜೀವನ್ ಮಿಷನ್‌ನ ಯೋಜನಾ ವೆಚ್ಚ ಗಣನೀಯವಾಗಿ ಹೆಚ್ಚಳ ಆಗಿದೆ. ಈ ಸಲ ಬಜೆಟ್‌ನಲ್ಲಿ ಕುಡಿಯುವ ನೀರು ಹಾಗೂ ನೈರ್ಮಲ್ಯ ಸಚಿವಾಲಯಕ್ಕೆ ರೂ. 74,226 ಕೋಟಿ ನೀಡಲಾಗಿದೆ. ಇದರಲ್ಲಿ ಸಿಂಹಪಾಲು ಜಲಜೀವನ್ ಮಿಷನ್‌ಗೇ ಹೋಗಲಿದೆ.

# ಬಜೆಟ್ ಜಾರಿಯಾದರೆ ಕೃಷಿ ಘೋಷಣೆ ಎಕ್ಸಲೆಂಟ್! – ಡಾ. ಪ್ರಕಾಶ್ ಕಮ್ಮರಡಿ





ನಿರ್ಮಲಾ ಸೀತಾರಾಮನ್ ಅವರು ಪ್ರಸಕ್ತ ಅವರು ಪ್ರಸಕ ಆಯವ್ಯಯದಲ್ಲಿ ಪ್ರಸ್ತಾಪಿಸಿರುವಂತೆ 100 ಹಿಂದುಳಿದ ಜಿಲ್ಲೆಗಳಲ್ಲಿ ಉತ್ಪಾದಕತೆ ಹೆಚ್ಚಿಸುವ ಜತೆಗೆ ಪಂಚಾಯಿತಿ ಮಟ್ಟದಲ್ಲಿ ಶೇಖರಣೆ ವ್ಯವಸ್ಥೆ ಜಾರಿಗೊಳಿಸುವ ಯೋಜನೆ ರೈತರಿಗೆ ಸಹಾಯವಾಗಲಿದೆ.

ಪ್ರಧಾನಮಂತ್ರಿ ಧನ ಧಾನ್ಯ ಕೃಷಿ ಹೆಸರಿನ ಈ ಯೋಜನೆಯು ಸುಮಾರು 1.7 ಕೋಟಿ ಕೃಷಿಕರಿಗೆ ಸಹಕಾರಿಯಾಗಲಿದ್ದು, ರಾಜ್ಯ ಸರಕಾರಗಳ ಸಹ ಯೋಗದಲ್ಲಿ ಜಾರಿಗೊಳಿಸುವುದಾಗಿ ಹೇಳಲಾಗಿದೆ. ಇದು ಕೃಷಿಕರ ಆದಾಯ ವೃದ್ಧಿ ಮತ್ತು ಕೃಷಿ ಉತ್ಪಾದನೆ ಹೆಚ್ಚಿಸುವ ಉದ್ದೇಶ ಹೊಂದಿದೆ. ದ್ವಿದಳ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ, ತರಕಾರಿ, ಹಣ್ಣು ಉತ್ಪಾದನೆಗೆ ಉತ್ತೇಜನ ಮತ್ತು ಅದಕ್ಕೆ ತಕ್ಕ ಮಾರುಕಟ್ಟೆ ನೀಡುವ ಸಮಗ್ರ ಕಾರ್ಯಕ್ರಮವನ್ನು ಘೋಷಣೆ ಮಾಡಲಾಗಿದೆ. ಸಾಗರೋತ್ಪನ್ನಗಳಿಗೆ, ಹವಾಮಾನ ವೈಪರೀತ್ಯಕ್ಕೆ ಅನುಗುಣವಾದ ಸುಧಾರಿತ ಬೀಜಗಳ ಉತ್ಪಾದನೆ ಮತ್ತು ಹತ್ತಿ ಬೆಳೆಗೆ ವಿಶೇಷ ಪ್ರೋತ್ಸಾಹ ನೀಡುವಂತಹ ಯೋಜನೆಗಳನ್ನು ಪ್ರಕಟಿಸಿರುವುದು ಅತ್ಯುತ್ತಮವಾಗಿದೆ.

ಕಿಸಾನ್ ಕ್ರೆಡಿಟ್ ಕಾರ್ಡ್ ಸಾಲದ ಮಿತಿಯನ್ನು ಮೂರು ಲಕ್ಷದಿಂದ ಐದು ಲಕ್ಷ ರೂ.ಗಳಿಗೆ ಏರಿಕೆ ಮಾಡಿರುವುದು ಸ್ವಾಗತಾರ್ಹ. ಇದರಿಂದ ರೈತರು ಮೈಕ್ರೋ ಫೈನಾನ್ಸ್ ದಂಧೆಯಿಂದ ಪಾರಾಗಬಹುದು. ರೈತ ಉತ್ಪಾದಕ ಸಂಘಟನೆಗಳು ಮತ್ತು ಸಹಕಾರ ನೀಡುವ ಸಂಸ್ಥೆಗಳಿಗೆ ಸಾಂಸ್ಥಿಕ ಚೌಕಟ್ಟು ನೀಡುವ ಪ್ರಸ್ತಾವನೆಯು, ರೈತ ಸಂಘಟನೆಗಳ ಸಾಂಘಿಕ ಶಕ್ತಿ ಹೆಚ್ಚಿಸಲಿದೆ.

ಹಾಗೆಯೇ 'ಗ್ರಾಮೀಣ ಸಮೃದ್ಧಿ ಮತ್ತು ಸ್ಥಿತಿ ಸ್ಥಾಪಕತ್ವ' ಯೋಜನೆಯು ಯುವಕರು, ಮಹಿಳೆಯರು, ಸಣ್ಣ ಮತ್ತು ಅತಿ ಸಣ್ಣ ರೈತರು ನಗರಕ್ಕೆ ವಲಸೆ ಹೋಗುವುದನ್ನು ತಪ್ಪಿಸಲಿದೆ. ಇದನ್ನು ಗಂಭೀರವಾಗಿ ಅವಲೋಕಿಸಿದರೆ ಯುವಕರು ಕೃಷಿಯಲ್ಲಿ ತೊಡಗಲು, ಯುವತಿಯರು ಕೃಷಿಕರನ್ನು ವರಿಸಲು ಮುಂದಾಗುವ ಸಾಧ್ಯತೆಗಳಿವೆ. ಆದರೆ ಇದು ಘೋಷಣೆಯಾಗಿ ಉಳಿಯಬಾರದಷ್ಟೆ.

ಬಿಹಾರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟು ಯಾವುದೋ ಒಂದು ಜಲ ಸಸ್ಯವಾದ ಮಖಾನ್ ಬೆಳೆ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿ ಘೋಷಿಸಲಾಗಿದೆ. ಇದೇ ರೀತಿ ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆ ಅಡಕೆಗೂ ಒಂದು ಪ್ರತ್ಯೇಕ ಮಂಡಳಿ ಬೇಕೆಂದು ಬೆಳೆಗಾರರ ಬಹುದಿನದ ಬೇಡಿಕೆಯನ್ನು ಇತ್ತೀಚಿಗೆ ಸಾಗರಕ್ಕೆ ಭೇಟಿ ನೀಡಿದ ಕೇಂದ್ರ ಕೃಷಿ ಸಚಿವರ ಮುಂದಿಟ್ಟಿದ್ದರು. ಅದು ಈಡೇರದಿರುವುದು ಅಡಕೆ ಬೆಳೆಗಾರರಿಗೆ ದೊಡ್ಡ ನಿರಾಸೆಯಾಗಿದೆ ಎಂದರು. ರೈತ ಬೆಳೆದಿರುವುದಕ್ಕೆ ಲಾಭದಾಯಕ ಧಾರಣೆ ಖಾತರಿಯಾಗಿ ಸಿಗಬೇಕು. ಆ ಮೂಲಕ ಒಂದು ಸ್ಥಿರವಾದ ಆದಾಯ ಮತ್ತು ಗೌರವಯುತ ಬದುಕು ಬೇಕೆನ್ನುವುದು, ಇದು ನಿನ್ನೆಯ ಬೇಡಿಕೆಯಲ್ಲ. ಸ್ವಾತಂತ್ರ್ಯಾನಂತರದ ದಿನಗಳಿಂದಲೂ ದೇಶದ ಅನ್ನದಾತರ ಕನಿಷ್ಠ ಬೇಡಿಕೆ ಇದು. ದಿಲ್ಲಿಯ ಸುತ್ತಮುತ್ತಲಿನ ಹೆದ್ದಾರಿಗಳಲ್ಲಿ ವರ್ಷಗಳಿಂದ ಹೋರಾಟ ನಡೆಸುತ್ತಿರುವ ದಲ್ಲೇವಾಲ ನೇತೃತ್ವದ ರೈತರ ಹೋರಾಟದ ಹಿಂದಿನ ಕೂಗು.

ಕೃಷಿಯು ಮಾನ್ಸೂನ್, ಹವಾಮಾನ ವೈಪರೀತ್ಯಕ್ಕೆ ಬಲಿಯಾಗುತ್ತಿದ್ದು, ರೈತರು ಮಾರುಕಟ್ಟೆ ಶಕ್ತಿಗಳ ಕೈವಶವಾಗಿ ಪರಿತಪಿಸುತ್ತಿದ್ದಾರೆ. ಇದಕ್ಕೆಲ್ಲಾ ಪರಿಹಾರ ನೀಡುವ ಪ್ರಾಮಾಣಿಕ ಪ್ರಯತ್ನಕ್ಕೆ ದೇಶದ ಆಳುವ ವರ್ಗ ಈವರೆಗೆ ಮನಸ್ಸು ಮಾಡದಿರುವುದು ವಿಷಾಧನೀಯ ಸಂಗತಿ.

**(ಲೇಖಕರು: ಕೃಷಿ ತಜ್ಞ)**

## ಶ್ರೀ ವಾಲ್ಮೀಕಿ ಜನಕಲ್ಯಾಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉದ್ಘಾಟನೆ

# ಸಮುದಾಯದ ಅಭಿವೃದ್ಧಿಗೆ ಒಟ್ಟಾಗಿ ಶ್ರಮಿಸಲು ಸಹಕಾರ ಸಚಿವ ಕೆ.ಎನ್. ರಾಜಣ್ಣ ಸಲಹೆ



**ಬೆಂಗಳೂರು (ಕೆ.ಆರ್.ಪುರಂ):** 'ಯಾವುದೇ ಸಮುದಾಯ ಆರ್ಥಿಕವಾಗಿ ಅಭಿವೃದ್ಧಿ ಹೊಂದಲು ಆ ಸಮುದಾಯದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚಾಗಬೇಕು' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಕೆ.ಆರ್.ಪುರದಲ್ಲಿ ಶ್ರೀ ವಾಲ್ಮೀಕಿ ಜನಕಲ್ಯಾಣ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉದ್ಘಾಟಿಸಿ ಅವರು ಮಾತನಾಡಿದರು.



ವಾಲ್ಮೀಕಿ ಸಮುದಾಯ ಅಭಿವೃದ್ಧಿ ಹೊಂದಬೇಕಾದರೆ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಸಂಘಟನೆಗೆ ಹೆಚ್ಚು ಒತ್ತು ನೀಡಿದರೆ ಸಮುದಾಯ ಅಭಿವೃದ್ಧಿಯಾಗುತ್ತದೆ. ಈ ನಿಟ್ಟಿನಲ್ಲಿ ಪಕ್ಷಾತೀತವಾಗಿ ಎಲ್ಲರೂ ಒಗ್ಗಟ್ಟಿನಿಂದ ಶ್ರಮಿಸುವುದರ ಮೂಲಕ ಸಮಾಜದ ಜನರಲ್ಲಿ ಆರ್ಥಿಕ ಸ್ವಾವಲಂಬನೆಗೆ ನೆರವಾಗಬೇಕು ಎಂದರು.

'ಸಹಕಾರ ಸಂಘ/ಬ್ಯಾಂಕ್ ಸ್ಥಾಪಿಸುವುದು ಸುಲಭ. ಆದರೆ, ಅದನ್ನು ಮುನ್ನಡೆಸಿಕೊಂಡು ಹೋಗುವುದೇ ದೊಡ್ಡ ಸವಾಲು' ಎಂದು ಹೇಳಿದರು.

ಮಾಜಿ ಸಚಿವ ಶ್ರೀರಾಮುಲು ಮಾತನಾಡಿ, 'ಒಳ್ಳೆಯ ಉದ್ದೇಶಕ್ಕಾಗಿ ಸಹಕಾರ ಸಂಘ ಸ್ಥಾಪನೆ ಮಾಡಿದ್ದೀರಿ. ಈ ಸಹಕಾರ ಬೆಂಗಳೂರಿಗೆ ಸೀಮಿತವಾಗದೆ, ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಣೆಯಾಗಲಿ. ಜನರಿಗೆ ಸಹಕಾರ ಸಂಘದ ಸೌಲಭ್ಯಗಳು ಸಿಗುವಂತಾಗಲಿ. ಜನರಲ್ಲಿ ಆರ್ಥಿಕ ಸಾಕ್ಷರತೆ ಹೆಚ್ಚಲಿ' ಎಂದರು.

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬೈರತಿ ಬಸವರಾಜ, ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಿರ್ದೇಶಕರುಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಸಹಕಾರಕ್ಕೆ ನಾವೀನ್ಯತೆಯ ಸ್ಪರ್ಶ ಗ್ರಾಮೀಣಾಭಿವೃದ್ಧಿಗೆ ಪೂರಕ

# ರೈತರ ಆದಾಯ ಹೆಚ್ಚಿಸಲು ಅಮುಲ್ ಮಾದರಿ ಸಹಕಾರಿ ಸಂಸ್ಥೆಗಳ ರಚನೆಗೆ ಮೋದಿ ಕರೆ

**ನವದೆಹಲಿ :** ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವದೆಹಲಿಯ ಭಾರತ್ ಮಂಟಪದಲ್ಲಿ ಗ್ರಾಮೀಣ ಭಾರತ್ ಮಹೋತ್ಸವ 2025 ಅನ್ನು ಉದ್ಘಾಟಿಸಿದರು. "ವಿಕಸಿತ ಭಾರತ ಮೂಲಕ ಗ್ರಾಮೀಣ ಭಾರತವನ್ನು ನಿರ್ಮಿಸುವುದು" ಎಂಬ ವಿಷಯವನ್ನು ಉದ್ದೇಶಿಸಿ ಮಾತನಾಡಿದ ಅವರು ಭಾರತದ ಗ್ರಾಮೀಣ ಭೂದೃಶ್ಯವನ್ನು ಮರುರೂಪಿಸುವಲ್ಲಿ ಸಹಕಾರಿ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸಿವೆ ಎಂದರು.

ರಾಷ್ಟ್ರವ್ಯಾಪಿ ರೈತರ ಆದಾಯವನ್ನು ಹೆಚ್ಚಿಸಲು ಅಮುಲ್‌ನಂತಹ ಐದರಿಂದ ಆರು ಹೊಸ ಸಹಕಾರಿ ಸಂಸ್ಥೆಗಳನ್ನು ರಚಿಸಲು ಪ್ರಧಾನಿ ಅವರು ಕರೆ ನೀಡಿದರು.

ಹೆಚ್ಚುವರಿಯಾಗಿ, ಅವರು ನೈಸರ್ಗಿಕ ಕೃಷಿಯನ್ನು ಒಂದು ಕಾರ್ಯಚರಣೆಯಾಗಿ ಮುಂದುವರಿಸಲು ಮತ್ತು ಹೆಚ್ಚು ರೈತರು ಸುಸ್ಥಿರ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವಂತೆ ಸಲಹೆ ನೀಡಿದರು. ಸ್ವ-ಸಹಾಯ ಗುಂಪುಗಳನ್ನು ಬೆಂಬಲಿಸುವುದರಿಂದ ಹಿಡಿದು ಕಿಸಾನ್ ಕ್ರೆಡಿಟ್ ಕಾರ್ಡ್‌ಗಳಂತಹ ಉಪಕ್ರಮಗಳವರೆಗೆ ಗ್ರಾಮೀಣ ಪರಿವರ್ತನೆಯಲ್ಲಿ ನಬಾರ್ಡ್‌ನ ನಾಯಕತ್ವವನ್ನು ಪ್ರಧಾನಮಂತ್ರಿಯವರು ಶ್ಲಾಘಿಸಿದರು.

ಸಹಕಾರಿ ಸಂಸ್ಥೆಗಳು ಹಳ್ಳಿಗಳಲ್ಲಿ ಆರ್ಥಿಕ ಸ್ಥಿರತೆ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸಲು, ವಲಸೆಯನ್ನು ಕಡಿಮೆ ಮಾಡಲು ಮತ್ತು ಸ್ಥಳೀಯ ಆರ್ಥಿಕತೆಯನ್ನು ಬಲಪಡಿಸಲು ಅಪಾರ ಸಾಮರ್ಥ್ಯವನ್ನು ಹೊಂದಿವೆ ಎಂದು ಅವರು ಹೇಳಿದರು. ಹಳ್ಳಿಗಳು ಉತ್ಪಾದನೆ ಮತ್ತು ನಾವೀನ್ಯತೆಗಳ ಸ್ವಾವಲಂಬಿ ಕೇಂದ್ರವಾಗಬೇಕು. ಗ್ರಾಮೀಣ ಕೈಗಾರಿಕೆಗಳನ್ನು ರಾಷ್ಟ್ರೀಯ ಮಾರುಕಟ್ಟೆಗಳೊಂದಿಗೆ ಸಂಪರ್ಕಿಸುವ ಅಗತ್ಯವನ್ನು ಕುರಿತು ಅವರು ಹೇಳಿದರು.



ಕೃಷಿ ಸಾಲ ಮತ್ತು ಗ್ರಾಮೀಣ ಜೀವನೋಪಾಯಕ್ಕೆ ಬೆಂಬಲದಲ್ಲಿ ಗಮನಾರ್ಹ ಪ್ರಗತಿಯನ್ನು ಮೋದಿ ಗಮನಿಸಿದರು. ಕಿಸಾನ್ ಕ್ರೆಡಿಟ್ ಕಾರ್ಡ್ ಯೋಜನೆಯಲ್ಲಿ ಜಾನುವಾರು ಮತ್ತು ಮೀನು ಸಾಕಣೆದಾರರನ್ನು ಸೇರಿಸುವುದು ಮತ್ತು ದೇಶಾದ್ಯಂತ 9,000ಕ್ಕೂ ಹೆಚ್ಚು ರೈತ ಉತ್ಪಾದಕ ಸಂಸ್ಥೆಗಳಿಗೆ (ಎಫ್‌ಪಿಒ) ಆರ್ಥಿಕ ನೆರವು ನೀಡಿರುವುದನ್ನು ಅವರು ಪ್ರಸ್ತಾಪಿಸಿದರು. ಇದಲ್ಲದೆ, ರೈತರಿಗೆ ಉತ್ತಮ ಆದಾಯವನ್ನು ಖಚಿತಪಡಿಸಿಕೊಳ್ಳಲು ಕಳೆದ ದಶಕದಲ್ಲಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯಲ್ಲಿ (MSP) ದೊರಕಿಸಿಕೊಡುವ ಪ್ರಯತ್ನ ಕುರಿತು ಅವರು ಹೇಳಿದರು.

"ಗ್ರಾಮೀಣ ಅಭಿವೃದ್ಧಿಯ ಮೂಲಕ ರಾಷ್ಟ್ರೀಯ ಅಭಿವೃದ್ಧಿಗೆ" ತಮ್ಮ ಸರ್ಕಾರದ ಬದ್ಧತೆಯನ್ನು ಮೋದಿ ಪುನರುಚ್ಚರಿಸಿದರು, ಕಳೆದ ದಶಕದಲ್ಲಿ 25 ಕೋಟಿ ಜನರು ಬಡತನ ರೇಖೆಯಿಂದ ಹೊರಬಂದಿದ್ದಾರೆ. ಹೆಚ್ಚಿನವರು ಗ್ರಾಮೀಣ ಪ್ರದೇಶದಿಂದ ಬಂದವರು. ಇದು ಬಡತನ ನಿರ್ಮೂಲನೆಯಲ್ಲಿ ಗಮನಾರ್ಹ ಸಾಧನೆಯಾಗಿದೆ ಎಂದು ಪ್ರಧಾನಿಯವರು ತಿಳಿಸಿದ್ದಾರೆ.

ಭಾರತದ ಗ್ರಾಮೀಣ ಆರ್ಥಿಕತೆಯಲ್ಲಿ ಮಹಿಳೆಯರು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದು, ಇದರಲ್ಲಿ ಸ್ವ-ಸಹಾಯ ಗುಂಪುಗಳ ಮತ್ತು ಮಹಿಳಾ ಸಹಕಾರ ಸಂಘಗಳ ಪಾತ್ರ ಪ್ರಮುಖವಾದುದಾಗಿದೆ. ಹಳ್ಳಿಗಳಲ್ಲಿ 1.15 ಕೋಟಿಗೂ ಹೆಚ್ಚು ಮಹಿಳೆಯರು ಲಕ್ಷಾಧಿಪತಿ ಸಹೋದರಿಗಳಾಗಿದ್ದಾರೆ. ಈ ಸಂಖ್ಯೆಯನ್ನು 3 ಕೋಟಿಗೆ ಹೆಚ್ಚಿಸುವ ಯೋಜನೆ ಇದೆ. ಹಿಂದುಳಿದ ಸಮುದಾಯಗಳ ಮಹಿಳೆಯರನ್ನು ಬೆಂಬಲಿಸಲು ವಿಶೇಷ ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಗ್ರಾಮೀಣ ಉದ್ಯಮಶೀಲತೆಯನ್ನು ಉತ್ತೇಜಿಸಲು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳೊಂದಿಗೆ (MSME) ಸ್ವ-ಸಹಾಯ ಗುಂಪುಗಳನ್ನು ಜೋಡಿಸುವ ಮಹತ್ವವನ್ನು ಅವರು ಹೇಳಿದರು.

ರೈತರನ್ನು ಸಬಲೀಕರಣಗೊಳಿಸಲು ಮತ್ತು ಅವರ ಉತ್ಪನ್ನಗಳಿಗೆ ನ್ಯಾಯಯುತ ಬೆಲೆಯನ್ನು ಖಚಿತಪಡಿಸಿಕೊಳ್ಳಲು ರೈತ ಉತ್ಪಾದಕ ಸಂಸ್ಥೆಗಳ (ಎಫ್‌ಪಿಒ) ಸಂಖ್ಯೆಯನ್ನು ಹೆಚ್ಚಿಸುವ ಮಹತ್ವವನ್ನು ಅವರು ಒತ್ತಿ ಹೇಳಿದರು. ರೈತರಿಗೆ ಹೆಚ್ಚು ಲಾಭದಾಯಕ ಕ್ಷೇತ್ರಗಳಲ್ಲಿ ಒಂದಾದ ಹಾಲು ಉತ್ಪಾದನೆಗೂ ಒತ್ತು ನೀಡಲಾಯಿತು.

ಗ್ರಾಮೀಣ ಸಮುದಾಯಗಳನ್ನು ಸಬಲೀಕರಣಗೊಳಿಸಲು ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಸರ್ಕಾರದ ಸಿದ್ಧವಿದೆ ಎಂದು ಪ್ರಧಾನಿ ಮೋದಿ ಪುನರುಚ್ಚರಿಸಿದರು. ರೈತರಿಗೆ ರೂ. 3 ಲಕ್ಷ ಕೋಟಿ ಒದಗಿಸಿರುವ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿಯಂತಹ ಉಪಕ್ರಮಗಳು ಮತ್ತು ಸಹಕಾರಿ-ಚಾಲಿತ ಯೋಜನೆಗಳು 2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವತ್ತ ಕೊಂಡೊಯ್ಯುತ್ತವೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

# ಶಿವರಾತ್ರಿ : ಶಿವ ಮತ್ತು ಪ್ರಕೃತಿಯ ಸಂಗಮದ ಆಚರಣೆ



"ಶಿವ ಶಿವ ಎಂದರೆ ಭಯವಿಲ್ಲ, ಶಿವ ಭಕ್ತರಿಗೆ ನರಕವಿಲ್ಲ" ಇದು ಜನ ಪ್ರಿಯ ಹಾಡಿನ ಸಾಲುಗಳು.

ಶಿವನಂದರೆ ಪ್ರಕೃತಿ ಬೇಡಿದೆಲ್ಲವನ್ನ ಕೊಡುವ ಕರುಣಾಮಯಿ. ಆತನ ಮಂದೆ ಎಲ್ಲರೂ ಸಮಾನರು. ಯಾರು ಪ್ರಕೃತಿಯನ್ನು ಪ್ರೀತಿಸಿ ರಕ್ಷಿಸುತ್ತಾರೋ ಅಂತವರಿಗೆ ಶಿವ ಒಲಿಯುತ್ತಾನೆ. ಆಡಂಬರ, ಅಬ್ಬರ, ಬೂಟಾಟಿಕೆಯನ್ನು ಶಿವ ಇಷ್ಟಪಡುವುದಿಲ್ಲ. ಆತ ಸಂಪೂರ್ಣ ಸರಳ. ಆತ ಭಕ್ತರಿಂದ ಏನನ್ನೂ ಬಯಸುವುದಿಲ್ಲ ಆದರೆ ತನನ್ನು ನಂಬಿದವರ ಕೈಬಿಡುವುದಿಲ್ಲ. ಈ ಸರಳ ಸೂತ್ರದ ಮೇಲೆ ಶಿವನ ಆರಾಧನೆ ನಡೆಯುತ್ತದೆ. ಆತ ಕಣ್ಣಪ್ಪನಿಗೂ, ಅಣ್ಣಪ್ಪನಿಗೂ ಸಹಿತ ಜನಸಾಮಾನ್ಯರಿಗೂ ಒಲಿಯುತ್ತಾನೆ. ಶಿವನನ್ನು ಸಂಪೂರ್ಣವಾಗಿ ನಂಬಿ ನಮ್ಮನ್ನು ಅವನಿಗೆ ಅರ್ಪಿಸಿಕೊಂಡರೆ ಸಾಕು ಮಿಕ್ಕಿದೆಲ್ಲಾ ಶಿವನೆ ನೋಡಿಕೊಳ್ಳುತ್ತಾನೆ.

ಮಹಾ ಶಿವರಾತ್ರಿ ಹಿಂದೂ ಧರ್ಮದಲ್ಲಿ ಅತ್ಯಂತ ಮಂಗಳಕರವಾದ ಹಬ್ಬಗಳಲ್ಲಿ ಒಂದಾಗಿದೆ. ಈ ಹಬ್ಬವು ಶಿವ ಮತ್ತು ಶಕ್ತಿಯ ಸಂಗಮವನ್ನು ಸಂಕೇತ ಎನ್ನಲಾಗುತ್ತದೆ. ದೃಕ್ ಪಂಚಾಂಗದ ಪ್ರಕಾರ, ದಕ್ಷಿಣ ಭಾರತದ ಕ್ಯಾಲೆಂಡರ್ ಮಾಘ ಮಾಸದ ಕೃಷ್ಣ ಪಕ್ಷದಲ್ಲಿ ಚತುರ್ದಶಿ ತಿಥಿಯಂದು ಮಹಾ ಶಿವರಾತ್ರಿಯನ್ನು ಆಚರಿಸಿದರೆ, ಉತ್ತರ ಭಾರತದ ಕ್ಯಾಲೆಂಡರ್ ಪ್ರಕಾರ ಫಾಲ್ಗುಣ ಮಾಸದಲ್ಲಿ ಮಹಾ ಶಿವರಾತ್ರಿಯನ್ನು ಆಚರಿಸುತ್ತದೆ. ಶಿವರಾತ್ರಿಯ ದಿನ ಭಕ್ತರು ದೇವಾಲಯಗಳಿಗೆ ಭೇಟಿ ನೀಡುತ್ತಾರೆ, ಶಿವ ಮತ್ತು ಪಾರ್ವತಿಯನ್ನು ಪೂಜಿಸುತ್ತಾರೆ, ಉಪವಾಸ ಆಚರಿಸಿ ಶಿವನ ಆಶೀರ್ವಾದವನ್ನು ಬೇಡುತ್ತಾರೆ. ಆದರೆ ಶಿವರಾತ್ರಿಯ ಹಿಂದಿನ ಕಥೆ ಏನು, ಈ ದಿನ ಏಕೆ ಇಷ್ಟು ಮಹತ್ವ ಎಂಬುದು ಇಲ್ಲಿದೆ.

ಒಂದು ದಂತಕಥೆಯ ಪ್ರಕಾರ ಬ್ರಹ್ಮಾಂಡದ ಸೃಷ್ಟಿಯ ಸಮಯದಲ್ಲಿ, ಶಿವನು ಮಹಾ ಶಿವರಾತ್ರಿಯ ಮಧ್ಯರಾತ್ರಿಯಲ್ಲಿ ಬ್ರಹ್ಮನ ಕೃಪೆಯಿಂದ ರುದ್ರನಾಗಿ ಅವತರಿಸುತ್ತಾನೆ. ಶಿವನು ತನ್ನ ಪತ್ನಿ ಸತಿಯ ದಹನದ ಸುದ್ದಿಯನ್ನು ಕೇಳಿದಾಗ ಸೃಷ್ಟಿ, ಸಂರಕ್ಷಣೆ ಮತ್ತು ವಿನಾಶದ ಸಂಕೇತವಾದ ಶಿವತಾಂಡವ ಮಾಡಿದ ಎನ್ನಲಾಗುತ್ತದೆ.

ಇನ್ನೊಂದು ಪಂಚಾಂಗದ ಪ್ರಕಾರ,ಸಾಗರದ ಮಂಥನದ ಸಮಯದಲ್ಲಿ ಸಮುದ್ರದಿಂದ ವಿಷವು ಹೊರಬಂದಿತು. ಅದು ಇಡೀ ಸೃಷ್ಟಿಯನ್ನು ನಾಶಮಾಡುವ ಶಕ್ತಿಯನ್ನು ಹೊಂದಿತ್ತು. ಆದರೆ, ಶಿವನು ವಿಷವನ್ನು ಕುಡಿದು ಇಡೀ ಪ್ರಪಂಚವನ್ನು ಸರ್ವನಾಶದಿಂದ ರಕ್ಷಿಸಿದ. ಆದ್ದರಿಂದ, ಬ್ರಹ್ಮಾಂಡವನ್ನು ಸಂರಕ್ಷಿಸಿದ್ದಕ್ಕಾಗಿ ಮಹಾ ಶಿವರಾತ್ರಿಯಂದು ಶಿವನ ಆರಾಧನೆ ಮಾಡುತ್ತಾರೆ.

**ಶಿವ ಪಾರ್ವತಿಯನ್ನು ಮದುವೆ ಆದ ದಿನ :** ಇಷ್ಟೇ ಅಲ್ಲದೇ ಈ ಶಿವರಾತ್ರಿಯ ಅನೇಕ ಕಥೆಗಳಿವೆ. ಈ ದಿನವನ್ನು ಶಿವ ಪಾರ್ವತಿ ದೇವಿಯನ್ನು ಮದುವೆಯಾದ ದಿನ ಎನ್ನಲಾಗುತ್ತದೆ. ಇದಲ್ಲದೇ, ಭಗೀರಥನ ತಪಸ್ಸಿಗೆ ಮೆಚ್ಚಿ ಭೂಮಿಗೆ ಇಳಿದು ಬಂದ ಗಂಗೆಯ ರಭಸವನ್ನು ತಡೆಯಲು ಶಿವ ತನ್ನ ಜಡೆಯಲ್ಲಿ ಗಂಗೆಯನ್ನು ಹಿಡಿದುಕೊಳ್ಳುತ್ತಾನೆ. ಇಲ್ಲದಿದ್ದರೆ ಗಂಗೆಯ ರಭಸಕ್ಕೆ ಇಡೀ ಭೂಲೋಕ ಕೊಚ್ಚಿ ಹೋಗುತ್ತಿತ್ತು. ಶಿವ ಗಂಗೆಯನ್ನು ಹಿಡಿದುಕೊಂಡಿದ್ದು ಕಂಡ ಭಗೀರಥ ಸ್ವಲ್ಪ ಚಿಂತೆಗೆ ಒಳಗಾಗುತ್ತಾನೆ. ಕೊನೆಗೆ ಗಂಗೆಯನ್ನು ಭೂಮಿಗೆ ಹರಿದು ಬಿಡುವಂತೆ ಶಿವನನ್ನು ಬೇಡಿಕೊಳ್ಳುತ್ತಾನೆ. ಭಗೀರಥನ ಭಕ್ತಿಗೆ ಮೆಚ್ಚಿದ ಶಿವ ತನ್ನ ಜಡೆಯಲ್ಲಿದ್ದ ಗಂಗೆಯನ್ನು ಹರಿದು ಬಿಡುತ್ತಾನೆ. ಈ ದಿನವನ್ನೇ ಪುರಾಣಗಳ ಪ್ರಕಾರ ಶಿವರಾತ್ರಿ ಹಬ್ಬ ಎಂದು ಆಚರಿಸಲಾಗುತ್ತದೆ ಎನ್ನುವ ನಂಬಿಕೆ ಸಹ ಇದೆ.

ಇದರ ಜೊತೆಗೆ , ಶಿವನ ಆದಿ ಮತ್ತು ಅಂತ್ಯ ಹುಡುಕಲು ಹೊರಟ ವಿಷ್ಣು ಹಾಗೂ ಬ್ರಹ್ಮನಿಗೆ, ಶಿವರಾತ್ರಿಯಂದು ಶಿವ ಲಿಂಗರೂಪಿಯಾಗಿ ದರ್ಶನ ನೀಡಿದ ಎಂದು ಸಹ ಹೇಳಲಾಗುತ್ತದೆ. ಜ್ಯೋತಿಷಿಗಳ ಪ್ರಕಾರ, ಮಹಾಶಿವರಾತ್ರಿಯಂದು ಮಾಡುವ ಪೂಜೆಯು ನಮಗೆ ವಿವಿಧ ರೀತಿಯಲ್ಲಿ ಪ್ರಯೋಜನವನ್ನು ನೀಡುತ್ತದೆ. ಈ ದಿನ, ಭಗವಾನ್ ಶಿವನ ಅಭಿಷೇಕದಿಂದ ಎಲ್ಲಾ ದುಃಖ ಮತ್ತು ನೋವುಗಳನ್ನು ಮತ್ತು ಎಲ್ಲಾ ರೀತಿಯ ಭಯ ನಿವಾರಣೆಯಾಗುತ್ತದೆ ಎಂಬ ನಂಬಿಕೆ ಇದೆ.

**ಅಭಿಷೇಕಪ್ರಿಯ ಎಂದೇ ಖ್ಯಾತನಾದ ಶಿವನಿಗೆ ದಿನವಿಡಿ ಹಾಲು, ಜೇನುತುಪ್ಪ ಹಾಗೂ ನೀರಿನ ಅಭಿಷೇಕ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಶಿವಲಿಂಗಕ್ಕೆ ಅಭಿಷೇಕ ಮಾಡಲಾಗುತ್ತದೆ. ಬಿಲ್ವಪತ್ರೆ, ತುಳಸಿ, ಶ್ರೀ ಗಂಧ, ಹಾಲು, ಜೇನುತುಪ್ಪಗಳಿಂದ ಅಭಿಷೇಕ ನಡೆಯುತ್ತದೆ. ಶಿವ ಪಂಚಾಕ್ಷರಿ ಮಂತ್ರ "ಓಂ ನಮ: ಶಿವಾಯ", ಹರ ಹರ ಮಹಾದೇವ, ಶಂಭೋ ಶಂಕರ...ಶಿವದೇವಾಲಯಗಳಲ್ಲಿ ಮಾರ್ದನಿಸುತ್ತದೆ. ನಾಲ್ಕು ಆಯಾಮಗಳ ರುದ್ರಪಠಣ, ಶಿವರಾತ್ರಿ ಪೂಜೆಯ ವಿಶೇಷ. ಶಿವಪುರಾಣದ ಪ್ರಕಾರ ರುದ್ರ ಹಾಗೂ ಚಮೆಗಳ ಪಠಣ ಶಿವನಿಗೆ ಅಚ್ಚುಮೆಚ್ಚು. ದೇವಾಲಯಗಳಲ್ಲಿ ಸಂಜೆ 6 ಗಂಟೆಯಿಂದ ಮೊದಲ್ಗೊಂಡು ಮುಂಜಾನೆ 6 ಗಂಟೆಯವರೆಗೆ ರುದ್ರಪಠಣದ ಮೂಲಕ ಶಿವಸ್ತುತಿ, ಜಾಗರಣೆ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಮಂಗಳಾರತಿ ಮಾಡಲಾಗುತ್ತದೆ. ಬೆಳಗ್ಗೆ 6 ಗಂಟೆಗೆ ಮಹಾಮಂಗಳಾರತಿ ಆಚರಣೆ ಮೂಲಕ ಜಾಗರಣೆ ಮುಕ್ತಾಯಗೊಳ್ಳುತ್ತದೆ. ಮೊದಲನೆಯ ಆಯಾಮದಲ್ಲಿ ಹಾಲು, ಎರಡನೆಯ ಆಯಾಮದಲ್ಲಿ ಮೊಸರು, ಮೂರನೆಯ ಆಯಾಮದಲ್ಲಿ ತುಪ್ಪ ಹಾಗೂ ನಾಲ್ಕನೆಯ ಆಯಾಮದಲ್ಲಿ ಜೇನುತುಪ್ಪಗಳಿಂದ ಶಿವನಿಗೆ ಅಭಿಷೇಕ ಮಾಡುವ ಪದ್ಧತಿಯೂ ಕೆಲವೆಡೆ ಇದೆ.**

ಈ ಮಂಗಳಕರ ದಿನದಂದು, ಶಿವ ತಾಂಡವ ಸ್ತೋತ್ರ ಮತ್ತು ಶಿವ ಚಾಲೀಸಾವನ್ನು ಪಠಿಸುವುದು ಸಹ ಮುಖ್ಯವಾಗುತ್ತದೆ ಹಾಗೂ ಈ ಮಂತ್ರಗಳ ಪಠಣದಿಂದ ಶಿವನ ರಕ್ಷೆ ಯಾವಾಗಲೂ ಭಕ್ತರ ಮೇಲೆ ಇರುತ್ತದೆ ಎಂಬುದು ನಂಬಿಕೆ. ಮಹಾದೇವನು ಈ ಅದ್ಭುತ ಸ್ತೋತ್ರಗಳನ್ನು ಪಠಿಸುವ ಮೂಲಕ ತನ್ನ ಎಲ್ಲಾ ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತಾನೆ ಎಂಬುದು ಹಿಂದಿನಿಂದಲೂ ವಾಡಿಕೆಯಲ್ಲಿರುವ ನಂಬಿಕೆ.

**ಶಿವರಾತ್ರಿಯ ದಿನ ರಾತ್ರಿ ಪೂಜೆಯೇ ವಿಶೇಷ :** ಸಾಮಾನ್ಯವಾಗಿ ಎಲ್ಲ ಹಬ್ಬಗಳಲ್ಲಿಯೂ ದೇವರಿಗೆ ಹಗಲು ಪೂಜೆ ನಡೆಯುತ್ತದೆ. ಆದರೆ ಶಿವರಾತ್ರಿ ಮಾತ್ರ ರಾತ್ರಿಯ ಹೊತ್ತು ಪೂಜೆ, ಭಜನೆ ನಡೆಸುವ ವಿಶೇಷ ಆಚರಣೆ. ರಾತ್ರಿ ಎಂದರೆ ಕತ್ತಲು, ಕತ್ತಲು ಎಂದರೆ ಅಜ್ಞಾನ. ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸು ಎಂದು ಆ ಶಿವನನ್ನು ಬೇಡುವ ಶುಭ ದಿನವೇ ಶಿವರಾತ್ರಿ. ಅಜ್ಞಾನ ತುಂಬಿರುವಲ್ಲಿ ಶಿವ ಸಂಚರಿಸಿ ಜ್ಞಾನ ದೀವಿಗೆಯನ್ನು ಬೆಳಗುತ್ತಾನೆ ಎಂಬ ನಂಬಿಕೆ ಇದೆ.

ಶಿವನಿಗೆ ಅತೀ ಶ್ರೇಷ್ಠವಾಗಿರುವ ಬಿಲ್ವ ಪತ್ರೆಯನ್ನು ಅರ್ಪಿಸಿ, ತಿಲಗಿ ಪುಷ್ಪ, ತುಳಸಿಯಿಂದ ಶಿವಲಿಂಗವನ್ನು ಅಲಂಕಾರ ಮಾಡಿ ಶಿವನ್ನು ಭಜಿಸಿದರೆ, ಪಾಪಗಳು ಪರಿಹಾರವಾಗುತ್ತವೆ, ಮೋಡಗಳೇ ಇಲ್ಲದ ಶುಭ್ರ ಆಕಾಶದಲ್ಲಿ ಬಂದಿರುವ ಚಂದ್ರನ ಬೆಳಕಿನಲ್ಲಿ ಶಿವನಿಗೆ ಅಭಿಷೇಕ ಮಾಡಿ ಆರಾಧಿಸಿದರೆ ಅತ್ಯಂತ್ರ ಶ್ರೇಷ್ಠ ಎಂಬ ನಂಬಿಕೆಗಳಿವೆ. ಶಿವರಾತ್ರಿಯ ದಿನವಿಡೀ ಉಪವಾಸ ಮಾಡಿ, ಜಾಗರಣೆ ಮಾಡಿ ಶಿವನನ್ನು ಆರಾಧಿಸಿದರೆ



ಸಕಲ ಪಾಪಗಳೂ ಕಳೆಯುತ್ತವೆ ಎಂದು ನಂಬಲಾಗಿದೆ.

ಎಲ್ಲಾ ಜೀವರಾಶಿಗಳನ್ನು ಪೊರೆಯುವ ಶಿವ ಎಲ್ಲಾ ಆಡಂಬರಗಳಿಂದ ಮುಕ್ತ. ಆತ ಆಭರಣಪ್ರಿಯನಲ್ಲ, ಅಲಂಕಾರ ಪ್ರಿಯನೂ ಅಲ್ಲ. ಭಸ್ಮವನ್ನು ಬಳಿದುಕೊಂಡು, ಹುಲಿಯ ಚರ್ಮವನ್ನು ಉಟ್ಟು, ಸ್ಮಶಾನದಲ್ಲಿರುವ ಸರಳ ಮತ್ತು ಅಮೋಘ ಶಕ್ತಿ.

ಶಿವನು ಸರಳತೆ, ಪ್ರಾಮಾಣಿಕತೆ ಮತ್ತು ನಿಷ್ಕಲ್ಮಶ ಮನಸ್ಸುಗಳ ಪ್ರತೀಕ. ಛಲಬಿಡದ ಸಾಧನೆಯ ದ್ಯೋತಕ. ಧ್ಯಾನಪ್ರಿಯ ಶಿವ ಭಕ್ತರಿಂದ ಬಯಸುವುದು ನಿಶ್ಕಲ್ಮಶ ಮತ್ತು ಪ್ರಾಮಾಣಿಕ ಭಕ್ತಿ ಮಾತ್ರ. ತೋರಿಕೆಯ ಮತ್ತು ಆಡಂಬರದ ಪೂಜೆಯನ್ನು ಬಯಸದ ಮಹಾದೇವನನ್ನು ಇಂದ್ರಿಯ ನಿಗ್ರಹ, ಧ್ಯಾನ, ಸಂಯಮ ಮತ್ತು ವಿಶ್ವಾಸ ಭರಿತರಾಗಿ ಶಿವರಾತ್ರಿಯಂದು ಧ್ಯಾನಿಸಿದರೆ ಆತ ಪ್ರಸನ್ನಗೊಳ್ಳುತ್ತಾನೆ.

**ಮಹಾಶಿವರಾತ್ರಿಯ ಉಪವಾಸ ಮತ್ತು ಜಾಗರಣೆಯ ಮಹತ್ವ :** ಪ್ರತಿ ವರ್ಷದ ಶಿವರಾತ್ರಿಯ ಸಮಯದಲ್ಲಿ ಶಿವನು, ಪಾರ್ವತಿಯ ಜೊತೆಯಲ್ಲಿ ಭೂಮಿಗೆ ಆಗಮಿಸುತ್ತಾನೆ.. ಭೂ-ಸಂಚಾರ ಮಾಡುತ್ತಾನೆ.. ಎಲ್ಲ ಸ್ಥಾವರ ಜಂಗಮ ಲಿಂಗಗಳಲ್ಲಿ ಸಂಕ್ರಮಣಗೊಳ್ಳುತ್ತಾನೆ.. ಹೀಗಾಗಿ ಶಿವರಾತ್ರಿಯಂದು ಶಿವನನ್ನು ಯಾರು ಪೂಜಿಸುವರೋ ಅವರ ಪಾಪಗಳು ಪರಿಹಾರವಾಗುತ್ತವೆ ಎಂದು ಸ್ವತಃ ಶಿವನೇ ತಿಳಿಸಿದ್ದಾನೆ ಎಂಬುದರ ಬಗ್ಗೆ ಶಾಸ್ತ್ರೋಕ್ತಿ ಇದೆ.

**ಶಿವರಾತ್ರಿಯ ಆಚರಣೆಯ ವೈಜ್ಞಾನಿಕ ಮಹತ್ವ :** ಸೂರ್ಯ ಮತ್ತು ಚಂದ್ರರ ಚಲನೆಯಿಂದಾಗುವ ಎಲ್ಲಾ ಕಾಲ ವ್ಯತ್ಯಾಸಕ್ಕೆ ಈ ನಮ್ಮ ದೇಹ ಹೊಂದಿಕೊಳ್ಳ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಈ ಹಬ್ಬದ ಆಚರಣೆ ಬಹುಮುಖ್ಯ. ಈ ಸಮಯದಲ್ಲಿ ಛಳಿಗಾಲವು ಮುಗಿದು ಬೇಸಿಗೆ ಕಾಲವು ಪ್ರಾರಂಭಗೊಳ್ಳುವುದು. ಅಂದರೆ ಈ ದಿನದಂದು ಚಳಿಗಾಲ ಉತ್ತುಂಗದಲ್ಲಿದ್ದು ಅಂದು ಕೃಷ್ಣ ಪಕ್ಷದ ಕೊನೆಯ ದಿನವೂ ಆಗಿರುತ್ತದೆ. ಈ ದಿನದಲ್ಲಿ ಸೂರ್ಯನ ಶಾಖ ಕಡಿಮೆಯಾಗಿರುತ್ತದೆ ಮತ್ತು ಚಂದ್ರನ ಪ್ರಕಾಶವೂ ಕ್ಷೀಣಿಸಿರುತ್ತದೆ. ನಮ್ಮ ಪೂರ್ವಜರು ಇದನ್ನೆಲ್ಲಾ ಅರಿತೇ ಹಬ್ಬ ಹರಿದಿನಗಳನ್ನು ಆಚರಿಸುತ್ತಿದ್ದರು. ಈ ವ್ಯತ್ಯಯದ ಸಮಯದಲ್ಲಿ ನಮ್ಮ ದೇಹದಲ್ಲಿ ಬಹಳಷ್ಟು ಬದಲಾವಣೆಗಳಾಗುತ್ತವೆ. ಈ ಕಾಲ ವ್ಯತ್ಯಾಸದ ಸಮಯದಲ್ಲಿ ನಮ್ಮಲ್ಲಿ ಉಸಿರಾಟದ ತೊಂದರೆ (ನೆಗಡಿ,

ಕೆಮ್ಮು, ಶೀತ ಮತ್ತಿತರೆ) ಬರುವುದು. ಈ ದಿನದಂದು ನಾವು ಮಾಡುವ ಶಿವನ ಪೂಜೆ, ಉಪವಾಸಗಳು ನಮಗೆ ತುಂಬಾ ಉಪಯುಕ್ತ. ಅಂದು ಪರಶಿವನಿಗೆ ನೀರಿನ ಅಭಿಷೇಕ ಮತ್ತು ಬಿಲ್ವ ಪತ್ರೆಯ ಪೂಜೆ. ಬಿಲ್ವ ಪತ್ರೆಯಲ್ಲಿ ಉಸಿರಾಟದ ತೊಂದರೆ ನಿವಾರಿಸುವ ಗುಣವಿದೆ. ಬಿಲ್ವವನ್ನು ಲಿಂಗದ ಮೇಲೆ ಹಾಕುವಾಗ ಅದರ ವಾಸನೆ ನಮ್ಮ ದೇಹದ ಒಳಗೆ ಹೋಗುವುದು. ಬಿಲ್ವವನ್ನು ಮೂಸಿ ಎಸೆಯುವುದು ಸರಿಯಾದ ವಿಧಾನ. ಶಿವನ ಲಿಂಗವು ಕಲ್ಲಿನದಾಗಿದ್ದು ಅದರ ಮೇಲೆ ನೀರನ್ನು ಸುರಿಯುವುದರಿಂದ ಬಹಳಷ್ಟು ಶಕ್ತಿ ಹೊರಹೊಮ್ಮುತ್ತದೆ. ಅದೊಂದು ವಿಶಿಷ್ಟ ಕಲ್ಲಿನಿಂದ ಮಾಡಿದ ಲಿಂಗವಾಗಿರುತ್ತದೆ.

**ಜಾಗರಣೆ, ಹಬ್ಬದ ಆಚರಣೆ :** ಕಾಶಿ ವಿಶ್ವನಾಥ, ಗೋಕರ್ಣದ ಮಹಾಬಲೇಶ್ವರ, ಧರ್ಮಸ್ಥಳದ ಮಂಜುನಾಥೇಶ್ವರ, ರಾಮೇಶ್ವರದ ರಾಮೇಶ್ವರ, ಭಟ್ಕಳದ ಮುರುಡೇಶ್ವರ ಸೇರಿದಂತೆ ರಾಜ್ಯ, ದೇಶ, ವಿದೇಶಗಳ ಶಿವದೇವಾಲಯಗಳಲ್ಲಿ ಅಂದು ವಿಶೇಷ ಪೂಜೆ ನಡೆಯುತ್ತದೆ. ಬಿಲ್ವಾರ್ಚನೆ, ರುದ್ರಾಭಿಷೇಕ, ಶಿವನಾಮ ಧ್ಯಾನಗಳ ಮೂಲಕ ಶಿವನನ್ನು ಆರಾಧಿಸಲಾಗುತ್ತದೆ. ಇಡೀ ರಾತ್ರಿ ಶಿವದೇವಾಲಯಗಳಲ್ಲಿ ರುದ್ರಪಠಣದ ಜೊತೆ ಜಾಗರಣೆ ನಡೆಯುತ್ತದೆ.

ಶಿವರಾತ್ರಿಯಂದು ಬೆಳಗ್ಗೆ ಬೇಗನೆ ಏಳುವ ಭಕ್ತರು, ಸ್ನಾನ ಮಾಡಿ, ಶುಚಿರ್ಭೂತರಾಗಿ ಶಿವದೇವಾಲಯಕ್ಕೆ ತೆರಳುತ್ತಾರೆ. ಕೆಲವರು ಕೈಲಾಸಯಂತ್ರ ರಚಿಸಿ, ಮನೆಯಲ್ಲಿಯೇ ಶಿವನಿಗೆ ವಿಶೇಷ ಪೂಜೆ ನಡೆಸುತ್ತಾರೆ. ಗಂಗಾ, ಬ್ರಹ್ಮಪುತ್ರ, ಕೃಷ್ಣ, ಕಾವೇರಿ, ತ್ರಿವೇಣಿ ಸಂಗಮ ಸೇರಿದಂತೆ ಪುಣ್ಯನದಿಗಳಲ್ಲಿ ಭಕ್ತರು ಸ್ನಾನ ಮಾಡುತ್ತಾರೆ. ಕೆಲವರು ಹಾಲು, ಹಣ್ಣು ಸೇವಿಸಿ ಲಘು ಉಪಹಾರ ಸೇವಿಸಿದರೆ, ಕೆಲವು ಭಕ್ತರು ದಿನವಿಡಿ ಏನನ್ನೂ ತಿನ್ನದೆ, ನೀರನ್ನೂ ಕುಡಿಯದೆ ಉಪವಾಸ ಇರುತ್ತಾರೆ. ಭಸ್ಮ ಲೇಪಿಸಿಕೊಂಡು, ಬಿಲ್ವಾರ್ಚನೆ ಮೂಲಕ ರುದ್ರ ಪಠಣ ಹಬ್ಬದ ಆಚರಣೆಯ ವಿಶೇಷ.

ಅಭಿಷೇಕಪ್ರಿಯ ಎಂದೇ ಖ್ಯಾತನಾದ ಶಿವನಿಗೆ ದಿನವಿಡಿ ಹಾಲು, ಜೇನುತುಪ್ಪ ಹಾಗೂ ನೀರಿನ ಅಭಿಷೇಕ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಶಿವಲಿಂಗಕ್ಕೆ ಅಭಿಷೇಕ ಮಾಡಲಾಗುತ್ತದೆ. ಬಿಲ್ವಪತ್ರೆ, ತುಳಸಿ, ಶ್ರೀ ಗಂಧ, ಹಾಲು, ಜೇನುತುಪ್ಪಗಳಿಂದ ಅಭಿಷೇಕ ನಡೆಯುತ್ತದೆ. ಶಿವ ಪಂಚಾಕ್ಷರಿ ಮಂತ್ರ "ಓಂ ನಮಃ ಶಿವಾಯ", ಹರ ಹರ ಮಹಾದೇವ, ಶಂಭೋ ಶಂಕರ...ಶಿವದೇವಾಲಯಗಳಲ್ಲಿ ಮಾರ್ದನಿಸುತ್ತದೆ. ನಾಲ್ಕು ಆಯಾಮಗಳ ರುದ್ರಪಠಣ, ಶಿವರಾತ್ರಿ ಪೂಜೆಯ ವಿಶೇಷ. ಶಿವಪುರಾಣದ ಪ್ರಕಾರ ರುದ್ರ ಹಾಗೂ ಚಮೆಗಳ ಪಠಣ ಶಿವನಿಗೆ ಅಚ್ಚುಮೆಚ್ಚು. ದೇವಾಲಯಗಳಲ್ಲಿ ಸಂಜೆ 6 ಗಂಟೆಯಿಂದ ಮೊದಲ್ಗೊಂಡು ಮುಂಜಾನೆ 6 ಗಂಟೆಯವರೆಗೆ ರುದ್ರಪಠಣದ ಮೂಲಕ ಶಿವಸ್ತುತಿ, ಜಾಗರಣೆ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಮಂಗಳಾರತಿ ಮಾಡಲಾಗುತ್ತದೆ. ಬೆಳಗ್ಗೆ 6 ಗಂಟೆಗೆ ಮಹಾಮಂಗಳಾರತಿ ಆಚರಣೆ ಮೂಲಕ ಜಾಗರಣೆ ಮುಕ್ತಾಯಗೊಳ್ಳುತ್ತದೆ. ಮೊದಲನೆಯ ಆಯಾಮದಲ್ಲಿ ಹಾಲು, ಎರಡನೆಯ ಆಯಾಮದಲ್ಲಿ ಮೊಸರು, ಮೂರನೆಯ ಆಯಾಮದಲ್ಲಿ ತುಪ್ಪ ಹಾಗೂ ನಾಲ್ಕನೆಯ ಆಯಾಮದಲ್ಲಿ ಜೇನುತುಪ್ಪಗಳಿಂದ ಶಿವನಿಗೆ



ಅಭಿಷೇಕ ಮಾಡುವ ಪದ್ಧತಿಯೂ ಕೆಲವೆಡೆ ಇದೆ.

ಶಿವನನ್ನು ಭಕ್ತರ ದೈವ ಎಂದು ಕರೆಯುತ್ತಾರೆ. ಸ್ವಾರ್ಥ ಮತ್ತು ಆಡಂಬರ ಇಲ್ಲದೆ ನಿಜವಾದ ಭಕ್ತಿಯಿಂದ ಶಿವನನ್ನು ಪೂಜಿಸಿದರೆ ಆತ ತನ್ನ ಭಕ್ತರ ಇಷ್ಟಾರ್ಥಗಳನ್ನು ಪೂರೈಸುತ್ತಾನೆ ಎನ್ನುವುದಕ್ಕೆ ಶಿವ ಪುರಾಣದಲ್ಲಿ ನೂರಾರು ಕಥಗಳಿವೆ

ರಾವಣನ ತಪ್ಪಸ್ಸಿಗೆ ಮೆಚ್ಚಿ ಆತ್ಮ ಲಿಂಗ ಕರುಣಿಸಿದ ಶಿವ ಭಸ್ಮಾಸುರನಿಗೆ ಭಸ್ಮ ಮಾಡುವ ಶಕ್ತಿಯನ್ನು ದಯಪಾಲಿಸುತ್ತಾನೆ ಬೇಡರ ಕಣ್ಣಪ್ಪ, ಭಕ್ತ ಮಾರ್ಕಂಡೇಯ, ಶಿವ ಭಕ್ತ ನಕ್ಕೀರನ್ ಹೀಗೆ ಭಕ್ತಿ ಮಾರ್ಗದ ಮೂಲಕ ಶಿವನ ಕೃಪೆಗೆ ಪಾತ್ರರಾದ ಭಕ್ತರ ದೊಡ್ಡ ಪಟ್ಟಿ ಬೆಳೆಯುತ್ತದೆ.

ಉತ್ತರ ಪ್ರದೇಶದ ಪ್ರಯಾಗ್ ರಾಜ್‌ನಲ್ಲಿ 144 ವರ್ಷಗಳ ನಂತರ ಮಹಾಕುಂಭ ಮೇಳ ನಡೆಯುತ್ತಿದ್ದು ಇಲ್ಲಿ ನಾಗಾ ಸಾಧುಗಳು, ಅಘೋರಿಗಳು, ಕಿನ್ನರರು, ನಾಥಪಂಥವರು ಸಹಿತ ನಾನಾ ಅಖಾಡಗಳ ಸಾಧು ಸಂತರ ಜೊತಗೆ ದೇಶ ವಿದೇಶಗಳಿಂದ ಆಗಮಿಸಿದ ಕೋಟ್ಯಂತರ ಮಂದಿ ಶಿವ ಪೂಜೆ, ಧ್ಯಾನ ಆರಾಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. 45 ಕೋಟಿಗೂ ಅಧಿಕ ಮಂದಿ ಈ ಮಹಾಕುಂಭ ಮೇಳದಲ್ಲಿ ಪುಣ್ಯ ಸ್ನಾನ ಮಾಡುವ ಮೂಲಕ ಶಿವನಿಗೂ ಗಂಗೆಗೂ ಪೂಜೆ ಸಲ್ಲಿಸಲಿದ್ದಾರೆ. ಗಂಗೆಗೂ ಶಿವನಿಗೂ ಅವಿನಾಭವ ನಂಟಿದೆ. ಗಂಗಾ ನದಿಯಲ್ಲಿ ಸ್ನಾನ ಮಾಡಿ ಶಿವನನ್ನು ಪೂಜಿಸುವುದರೆ ಮನಸ್ಸಿಗೆ ನೆಮ್ಮದಿ ಸಿಗುತ್ತದೆ. ಶಿವನು ಸಂತೃಪ್ತನಾಗುತ್ತಾನೆ.

**ಧಾರ್ಮಿಕ ಪಂಡಿತರು, ಋಷಿಮುನಿ :** ಧ್ಯಾನಿಗಳು ಹೇಳುವಂತೆ ದೇವರೊಂದಿಗಿನ ನಮ್ಮ ಸಂಬಂಧ ಸಂಪೂರ್ಣವಾಗಿ ನಿಸ್ವಾರ್ಥ ದಿಂದ ಕೂಡಿರಬೇಕು ದೇವರೆ ನನನ್ನು ಶ್ರೀಮಂತನಾಗಿ ಮಾಡಿದರೆ ನಾನು ನಿನಗೆ ಬಂಗಾರ ನೀಡುತ್ತೇನೆ, ಲಕ್ಷಾಂತರ ರೂಪಾಯಿ ನಿನ್ನ ಹುಂಡಿಗೆ ಹಾಕುತ್ತೇನೆ ಎನ್ನುವ ರೀತಿಯ ಲೌಕಿಕ ಜಗತ್ತಿನ ವ್ಯವಹಾರದ ಸಂಬಂಧಗಳನ್ನು ದೇವರ ಜೊತೆಗೆ ಇಟ್ಟುಕೊಳ್ಳಬಾರದು, ನಮ್ಮ ಜೀವನವನ್ನು ಸಂಪೂರ್ಣವಾಗಿ ಶಿವನಿಗೆ ಅರ್ಪಿಸಿಕೊಳ್ಳಬೇಕು ಮತ್ತು ನಿಶ್ಚಿಂತರಾಗಿರಬೇಕು. ಅದೇ ನಿಜವಾದ ಶಿವ ಭಕ್ತಿ.

**– ಸವಿತಾ ನಾಯ್ಕ್, ಬೆಂಗಳೂರು.**

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ಸಹಕಾರ ಸಂಘ/ಬ್ಯಾಂಕುಗಳಲ್ಲಿ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಅಳವಡಿಸುವ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30–ಬಿರಡಿ ನಿರ್ದೇಶನ ನೀಡುವ ಕುರಿತು.

**ಓದಲಾಗಿದೆ :**
1. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ರವರ ಸುತ್ತೋಲೆ ಸಂಖ್ಯೆ:ಸಿಆಸುಇ:06:ಸೇನೆನಿ:2024, ದಿನಾಂಕ: 20–5–2024
2. ಸಹಕಾರ ಸಂಘಗಳ ನಿಬಂಧಕರ ಕಛೇರಿ ಪತ್ರ ಸಂಖ್ಯೆ: ಆರ್‌ಸಿಎಸ್/ಆರ್‌ಎಸ್‌ಆರ್/ ಎಕ್ಸ್‌ಎಂಪಿ/136/2024–25, ದಿನಾಂಕ: 03–12–2024

### ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂ. (1) ರ ಸುತ್ತೋಲೆಯಲ್ಲಿ, ದಿನಾಂಕ:21–12–2023 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿ ನೀತಿಯನ್ನು ಜಾರಿಗೊಳಿಸಲು ನಿರ್ಣಯಿಸಲಾಗಿದ್ದು, ಅದರಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ನಡೆಯುವ ಎಲ್ಲಾ ಹೊರಗುತ್ತಿಗೆ ನೇಮಕಾತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮವನ್ನು ಕೆಲವು ಸೂಚನೆಗಳೊಂದಿಗೆ ಕಡ್ಡಾಯವಾಗಿ ಪಾಲಿಸುವಂತೆ ಸೂಚಿಸಲಾಗಿದೆ.

ಮೇಲೆ ಓದಲಾದ ಕ್ರಸಂ. (2) ರ ಸಹಕಾರ ಸಂಘಗಳ ನಿಬಂಧಕರ ಪತ್ರದಲ್ಲಿ, ಸಹಕಾರ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಸಹಕಾರ ಸಂಘ/ಬ್ಯಾಂಕುಗಳಲ್ಲಿ ನಡೆಯುವ ಎಲ್ಲಾ ರೀತಿಯ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಅಳವಡಿಸುವ ಕುರಿತು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 30–ಬಿ ರಡಿ ನಿರ್ದೇಶನ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

### ಸರ್ಕಾರದ ಆದೇಶ ಸಂಖೆ: ಸಿಒ 328 ಸಿಎಲ್‌ಎಸ್ 2024, ಬೆಂಗಳೂರು, ದಿನಾಂಕ : 30.01.2025

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಸಹಕಾರ ಸಂಘ/ಬ್ಯಾಂಕುಗಳಲ್ಲಿ ಹೊರಗುತ್ತಿಗೆ ನೇಮಕಾತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮೀಸಲಾತಿ ನಿಯಮವನ್ನು ಈ ಕೆಳಕಂಡ ಸೂಚನೆಗಳೊಂದಿಗೆ ಕಡ್ಡಾಯವಾಗಿ ಪಾಲಿಸಲು ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 30–ಬಿ ರನ್ವಯ ನಿರ್ದೇಶಿಸಿ ಆದೇಶಿಸಿದೆ.

1. ಹೊರಗುತ್ತಿಗೆ ಮೀಸಲಾತಿಯ ನೀತಿಯು 45 ದಿನಗಳಿಗಿಂತ ಕಡಿಮೆ ಅವಧಿಯ ನೇಮಕಾತಿಗಳಿಗೆ ಅನ್ವಯಿಸುವುದಿಲ್ಲ.
2. ಪ್ರತಿ ವರ್ಷವು ಹೊರ ಸಂಪನ್ಮೂಲ ಏಜೆನ್ಸಿಗಳಿಂದ ಕೆ.ಟಿ.ಪಿ.ಪಿ ಅಧಿನಿಯಮ 1999 ರಂತೆ ಟೆಂಡರ್ ಕರೆಯುವಾಗ ಕಡ್ಡಾಯವಾಗಿ ಮೀಸಲಾತಿಯಂತೆ ಸಿಬ್ಬಂದಿಗಳನ್ನು ಪಡೆಯಲು ಷರತ್ತುಗಳನ್ನು ನಮೂದಿಸುವುದು.
3. ಹೊರಗುತ್ತಿಗೆ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗಗಳಿಗೆ ನಿಗದಿಪಡಿಸಿದ ಮೀಸಲಾತಿ ಪ್ರಮಾಣದಲ್ಲಿ ಕನಿಷ್ಠ ಶೇಕಡ 33 ರಷ್ಟು ಮಹಿಳೆಯರನ್ನು ನೇಮಕಾತಿ ಮಾಡಿಕೊಳ್ಳತಕ್ಕದ್ದು.
4. ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಕಡ್ಡಾಯವಾಗಿ ಹೊರ ಸಂಪನ್ಮೂಲ ಏಜೆನ್ಸಿಯು ಅಂತಿಮಗೊಳಿಸಿದ ಸಿಬ್ಬಂದಿಗಳ ಪಟ್ಟಿ ಮೀಸಲಾತಿಯಂತೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಜಾತಿ ಪ್ರಮಾಣ ಪತ್ರ ಮತ್ತು ಇತರೆ ದಾಖಲೆಗಳನ್ನು ಹೊರ ಸಂಪನ್ಮೂಲ ಏಜೆನ್ಸಿಯು ಪಡೆದು ನಿರ್ವಹಿಸತಕ್ಕದ್ದು. ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಈ ಬಗ್ಗೆ ಪರಿಶೀಲಿಸಿ ಕಾರ್ಯಾದೇಶವನ್ನು ನೀಡಲು ಕ್ರಮವಹಿಸುವುದು. (ಸಿಂಧುತ್ವ ಪ್ರಮಾಣ ಪತ್ರದ ಅಗತ್ಯವಿರುವುದಿಲ್ಲ).
5. ಒಂದು ವೇಳೆ ನೇಮಕಾತಿಗೊಂಡ ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾಗದೇ ಇದ್ದಲ್ಲಿ/ಕೆಲಸವನ್ನು ಅರ್ಧದಲ್ಲಿ ಬಿಟ್ಟಿದಲ್ಲಿ ಅಂತಹ ಖಾಲಿ ಉಳಿಯುವ ಸ್ಥಾನವನ್ನು ಭರ್ತಿ ಮಾಡಲು ಅದೇ ಪ್ರವರ್ಗದ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲು ಅಭ್ಯರ್ಥಿಗಳನ್ನು ಒದಗಿಸುವ ಏಜೆನ್ಸಿಯು ಕ್ರಮಕೈಗೊಳ್ಳತಕ್ಕದ್ದು.
6. ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಅಭ್ಯರ್ಥಿಯ ಕನಿಷ್ಠ ವಯೋಮಿತಿ 18 ವರ್ಷ ಮತ್ತು ಗರಿಷ್ಠ ವಯೋಮಿತಿ 60 ವರ್ಷಗಳಾಗಿರತಕ್ಕದ್ದು.
7. ಸಾಮಾಜಿಕ ನ್ಯಾಯ ಮತ್ತು ಸಮಾನ ಉದ್ಯೋಗಾವಕಾಶಗಳನ್ನು ಒದಗಿಸುವ ದೃಷ್ಟಿಯಿಂದ ಹೊರಗುತ್ತಿಗೆ ನೇಮಕಾತಿಯಲ್ಲಿ ಮೀಸಲಾತಿಯನ್ನು ಅಳವಡಿಸುತ್ತಿರುವುದರಿಂದ ಯಾವುದೇ ಕಾರಣಕ್ಕೂ ಹೊರಗುತ್ತಿಗೆ ನೌಕರರನ್ನು ಖಾಯಂ ಮಾಡಲು ಪರಿಗಣಿಸತಕ್ಕದಲ್ಲ.
8. ಈ ನಿರ್ದೇಶನವು ಈ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಜಾರಿಯಾಗತಕ್ಕದ್ದು.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ**

**ಸಹಿ/–**

**ಎ.ಸಿ. ದಿವಾಕರ್**

**ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ.**

# ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆ
# ಹೊಸ ಸದಸ್ಯರ ನೋಂದಣಿಗೆ ಅವಧಿ ವಿಸ್ತರಣೆ

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : **2024-25ನೇ ಸಾಲಿಗೆ ಸಹಕಾರಿಗಳಿಗಾಗಿ ಯಶಸ್ವಿನಿ ಆರೋಗ್ಯ ರಕ್ಷಣಾ ಯೋಜನೆಯನ್ನು ಜಾರಿಗೊಳಿಸಲು ಹಾಗೂ ಹೊಸ ಸದಸ್ಯರನ್ನು ನೋಂದಾಯಿಸುವ ಅವಧಿಯನ್ನು ದಿನಾಂಕ:01.02.2025 ರಿಂದ ದಿನಾಂಕ:31.03.2025ರವರೆಗೆ ವಿಸ್ತರಿಸುವ ಕುರಿತು**

ಉಲ್ಲೇಖ:
1. **ಸರ್ಕಾರದ ಆದೇಶ ಸಂಖ್ಯೆ ಸಿ.ಒ.237 ಸಿಎಲ್ಎಸ್ 2024 ದಿನಾಂಕ:30.11.2024**
2. **ಸರ್ಕಾರದ ಆದೇಶ ಸಂಖ್ಯೆ:237 ಸಿ.ಎಲ್.ಎಂ 2024 ದಿನಾಂಕ:31.12.2024ರ ತಿದ್ದುಪಡಿ ಆದೇಶ**
3. **ಸಹಕಾರ ಸಂಘಗಳ ನಿಬಂಧಕರ ಕಛೇರಿ ಪತ್ರ ಸಂಖ್ಯೆ:ಅನಿ(ಕೈಗಾರಿಕೆ) ಯಶಸ್ವಿನಿ ಗುರಿ/ 118/2024-25 ದಿನಾಂಕ:29.01.2025.**

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಸರ್ಕಾರದ ಆದೇಶದಲ್ಲಿ 2024-25ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯನ್ನು ಮುಂದುವರೆಸಲು ಹಾಗೂ ಈ ಯೋಜನೆಯಲ್ಲಿ ಹೊಸ ಸದಸ್ಯತ್ವ ನೋಂದಣಿ ಪ್ರಾರಂಭಿಸಲು ಕೆಲವು ಶರತ್ತುಗಳೊಂದಿಗೆ ಆದೇಶ ಹೊರಡಿಸಲಾಗಿತ್ತು. ಸದರಿ ಆದೇಶದಲ್ಲಿ ನೋಂದಣಿ ಅವಧಿಯನ್ನು ದಿನಾಂಕ:01.12.2024 ರಿಂದ ದಿನಾಂಕ:31.12.2024ರ ವರೆಗೆ ನಿಗದಿಪಡಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪ್ರಕಾರ ಸರ್ಕಾರದ ತಿದ್ದುಪಡಿ ಆದೇಶದಲ್ಲಿ 2024-25ನೇ ಸಾಲಿಗೆ ನೋಂದಣಿ ಅವಧಿಯನ್ನು ದಿನಾಂಕ:01.01.2025 ರಿಂದ 31..01.2025 ರವರೆಗೆ ವಿಸ್ತರಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವನೆಯಲ್ಲಿ ರಾಜ್ಯಾದ್ಯಂತ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿದ್ದು ಡಿಸೆಂಬರ್-2024 ಮತ್ತು ಜನವರಿ-2025ರ ತಿಂಗಳುಗಳಲ್ಲಿ ಹೆಚ್ಚಿನ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ/ ಹಾಲು ಉತ್ಪಾದಕರ ಸಹಕಾರ ಸಂಘಗಳು ಹಾಗೂ ಇತರೆ ಸಹಕಾರ ಸಂಘಗಳ ಆಡಳಿತಮಂಡಳಿಗೆ ಚುನಾವಣೆ ನಿಗದಿಯಾಗಿದ್ದು ಇಲಾಖೆಯ ಕ್ಷೇತ್ರ ಸಿಬ್ಬಂದಿಗಳು/ಅಧಿಕಾರಿಗಳು ಚುನಾವಣಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದು ಇದರಿಂದಾಗಿ ಯಶಸ್ವಿನಿ ನೋಂದಣಿಯಲ್ಲಿ ಹೆಚ್ಚಿನ ಪ್ರಗತಿ ಆಗಿರುವುದಿಲ್ಲವೆಂದು ಹಾಗೂ ನಿಗದಿಪಡಿಸಿರುವ ಗುರಿಯ ಪೈಕಿ ಇಲ್ಲಿಯವರೆಗೆ ಸುಮಾರು ಹತ್ತು ಲಕ್ಷ ಸದಸ್ಯರ ನೋಂದಣಿ ಮಾತ್ರವಾಗಿದ್ದು ಇನ್ನೂ ಅನೇಕ ಸದಸ್ಯರು ನೋಂದಾಯಿಸಿಕೊಳ್ಳಲು ಆಸಕ್ತರಾಗಿರುವುದರಿಂದ ಯೋಜನೆ ಅಡಿ ಹೆಚ್ಚಿನ ರೀತಿಯಲ್ಲಿ ಪ್ರಗತಿ ಸಾಧಿಸಲು 2024-25ನೇ ಸಾಲಿನ ಯಶಸ್ವಿನಿ ಯೋಜನೆ ಅಡಿ ಸದಸ್ಯರ ನೋಂದಣಿ/ನವೀಕರಣ ಅವಧಿಯನ್ನು ದಿನಾಂಕ 01.02.2025 ರಿಂದ ದಿನಾಂಕ:31.03.2025 ರವರೆಗೆ ವಿಸ್ತರಿಸಲು ನಿಬಂಧಕರು ಕೋರಿರುತ್ತಾರೆ.

**ಪ್ರಸ್ತಾವನೆಯನ್ನು ಕೂಲಂಕುಶವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.**

**ಸರ್ಕಾರದ ಆದೇಶ ಸಂಖ್ಯೆ ಸಿ.ಒ.237 ಸಿಎಲ್ಎಸ್ 2024 ದಿನಾಂಕ:31.01.2025**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2024-25ನೇ ಸಾಲಿನಲ್ಲಿ ಯಶಸ್ವಿನಿ ಯೋಜನೆಯನ್ನು ಮುಂದುವರೆಸಲು ಹಾಗೂ ಈ ಯೋಜನೆಯಲ್ಲಿ ಹೊಸ ಸದಸ್ಯರನ್ನು ನೋಂದಾಯಿಸಲು /ನವೀಕರಣಗೊಳಿಸುವ ಸಲುವಾಗಿ ಅವಧಿಯನ್ನು ದಿನಾಂಕ:01.02.2025 ರಿಂದ ದಿನಾಂಕ:31.03.2025ರ ವರೆಗೆ ವಿಸ್ತರಿಸಿ ಆದೇಶಿಸಿದೆ.

ಮುಂದುವರೆದು ಸರ್ಕಾರದ ಆದೇಶ ಸಂಖ್ಯೆ ಸಿಒ 237 ಸಿಎಲ್ಎಸ್ 2024 ದಿನಾಂಕ:30.11.2024ರ ಆದೇಶದಲ್ಲಿನ ಷರತ್ತುಗಳನ್ನುಯ ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

**ಸಹಿ/-**

**ರಂಗನಾಥ. ಜಿ.**

**ಸರ್ಕಾರದ ಅಧೀನ ಕಾರ್ಯದರ್ಶಿ-3**

**ಸಹಕಾರ ಇಲಾಖೆ.**





**ಶಿವಕುಮಾರ್ ಎಂ.ಎನ್.**
ನಿರ್ದೇಶಕರು, ಆರ್&ಇ ವಿಭಾಗ,
ಕೇಂದ್ರ ಕಛೇರಿ, ಬೆಂಗಳೂರು


# ಸಹಕಾರ ಸಂಸ್ಥೆಗಳಲ್ಲಿ ದಕ್ಷನಾಯಕತ್ವಕ್ಕೆ ಹನ್ನೆರಡು ಸೂತ್ರಗಳು ಒಂದು ಅವಲೋಕನ

**ಸಹಕಾರ ಚಳವಳಿಯ ಯಶಸ್ಸಿಗೆ ದಕ್ಷನಾಯಕತ್ವ ಅಗತ್ಯ. ಎಲ್ಲೆಲ್ಲಿ ದಕ್ಷ ನಾಯಕತ್ವವಿದೆಯೋ ಅಂತಹ ಸಹಕಾರ ಸಂಸ್ಥೆಗಳು ಯಶಸ್ವಿಯಾಗಿರುವುದನ್ನು ಕಾಣಬಹುದು. ನಾಯಕತ್ವ ಯಾರೊಬ್ಬರ ಮೇಲೂ ಹೇರುವಂತಹುದಲ್ಲ. ಅಭ್ಯಾಸ, ಅನುಭವ, ಮನೋಭಾವನೆ, ಗುಣಗಳಿಂದ ನಾಯಕತ್ವದ ಲಕ್ಷಣಗಳು ಗೋಚರವಾಗುತ್ತವೆ. ದಕ್ಷ ನಾಯಕತ್ವಕ್ಕೆ 12 ಶ್ರೇಷ್ಠ ಗುಣಗಳು ಅಗತ್ಯವಿರುವುದನ್ನು ಲೇಖನದಲ್ಲಿ ವಿವರಿಸಲಾಗಿದೆ.**



ಸಹಕಾರ ಸಂಸ್ಥೆಗಳ ಪ್ರಮುಖ ಆಸ್ತಿಯೆಂದರೆ, "ಮಾನವ ಸಂಪನ್ಮೂಲ" ಮತ್ತು ಅದರ ಕ್ರಮಬದ್ಧ ಸದ್ಬಳಕೆಯಾಗಿದೆ. ಆದ್ದರಿಂದ ಮಾನವರಿಂದಲೇ ನಿರ್ಮಿತವಾದ ಈ ಸಹಕಾರ ಸಂಸ್ಥೆಗಳ ವ್ಯವಹಾರ ಚಟುವಟಿಕೆಗಳ ಯಶಸ್ವಿಗೆ ಹಾಗೂ ಕನಿಷ್ಠ ಶ್ರಮದ ಬುದ್ಧಿವಂತಿಕೆಯಿಂದ ಗರಿಷ್ಠಮಟ್ಟದಲ್ಲಿ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಯೋಗ್ಯ, ಅನುಭವವುಳ್ಳ ನಾಯಕತ್ವವು ಅತ್ಯವಶ್ಯಕವಾಗಿರುತ್ತದೆ.

ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಯಲ್ಲಿ ನಾಯಕತ್ವವಿರಬಹುದು. ಗ್ರಾಮೀಣ ಪ್ರದೇಶಗಳಲ್ಲಿ ನಾಯಕತ್ವವಿರಬಹುದು ಮತ್ತು ಬ್ಯಾಂಕುಗಳಲ್ಲಿ ನಾಯಕತ್ವವಿರಬಹುದು. ಹೀಗೆ, ಸಹಕಾರ ಸಂಸ್ಥೆಗಳನ್ನೊಳಗೊಂಡಂತೆ ಯಾವುದೇ ಸಂಘಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಜನರ ನಡುವಿನ ಸಂಬಂಧದ ಗುಣಮಟ್ಟವನ್ನೇ ಬದಲಾಯಿಸಬಲ್ಲ ಮತ್ತು ಸಂಸ್ಥೆಯ ಪ್ರತಿಷ್ಠೆ, ಗೌರವವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ಸಾಮರ್ಥ್ಯವುಳ್ಳ, ಉತ್ತಮ ತೀರ್ಮಾನ ತೆಗೆದುಕೊಳ್ಳುವ ಪ್ರಮುಖ ವ್ಯಕ್ತಿಯೇ ಮುಂದಾಳು ಅಥವಾ ನಾಯಕನಾಗಿರುತ್ತಾನೆ.



**ಗುಜರಾತ್ ರಾಜ್ಯದಲ್ಲಿ ಕೈರಾ ಎಂಬ ಜಿಲ್ಲೆಯ ಆನಂದ್ ಎಂಬ ಹಳ್ಳಿಯಲ್ಲಿ 1946ರಲ್ಲಿ ಪ್ರಾರಂಭವಾಗಿ ಇಂದಿನವರೆಗೂ ಪ್ರಗತಿ ಪಥದಲ್ಲಿ ನಡೆಯುತ್ತಿರುವ "ಅಮೂಲ್" ಎಂಬ ಸಂಸ್ಥೆಗೆ ಕಾರಣಕರ್ತರು ಕ್ಷೀರ ಕ್ರಾಂತಿ ಪಿತಾಮಹಾ ಡಾ॥ ವರ್ಗೀಸ್ ಕುರಿಯನ್, ಇವರು ಜನರ ಮುಂದೆ ನಾಯಕನಾಗಲಿಲ್ಲ, ಬದಲಾಗಿ ಕೃಷಿಕರಿಗೆ, ಕೂಲಿ ಕಾರ್ಮಿಕರಿಗೆ ನಾಯಕತ್ವವನ್ನು ವಹಿಸಿಕೊಡುವುದರ ಮೂಲಕ ಉತ್ತಮ ಮಾರ್ಗದರ್ಶನ ಮಾಡಿ ಹಾಗೂ ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಹಿತದೃಷ್ಟಿಯಿಂದ ಸರಿ ಎನ್ನುವಂತಹ ವಿಷಯದ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಂಡು ಇದಕ್ಕೆ ಸಂಬಂಧಪಟ್ಟ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಕ್ಕೆ ತಂದಿದ್ದರ ಪ್ರತಿಫಲವಾಗಿ ಈ ಕ್ಷೇತ್ರಕ್ಕೆ ನಾಯಕನಾಗಿ ಜನಮನದಲ್ಲಿ ಉಳಿದಿದ್ದಾರೆ.**

ಸಹಕಾರ ಸಂಸ್ಥೆಗಳು ಆರೋಗ್ಯಕರವಾಗಿ ಬೆಳೆದು ಪ್ರಗತಿಯನ್ನು ಸಾಧಿಸಬೇಕಾದರೆ ಸದಸ್ಯರಲ್ಲಿ ಹಾಗೂ ಸಂಸ್ಥೆಗಳನ್ನು ನಡೆಸುವ ನಾಯಕರಲ್ಲಿ ಜಾಗೃತ ಮನೋಭಾವನೆ, ಜವಾಬ್ದಾರಿ ಹಾಗೂ ಕ್ರಿಯಾತ್ಮಕ ಹೊಣೆಗಾರಿಕೆ ಇರಬೇಕಾಗುತ್ತದೆ.. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಹೊಸ ಆರ್ಥಿಕ ನೀತಿಯ ಪ್ರಮುಖ ಅಂಶಗಳಾದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳಲ್ಲಿ ಉದ್ಭವವಾಗುವ ಸವಾಲುಗಳನ್ನು ಸಹಕಾರ ಕ್ಷೇತ್ರವು ಎದುರಿಸಿ ಬದುಕುಳಿಯಬೇಕಾದರೆ ಪ್ರಜಾಸತ್ತಾತ್ಮಕವಾದ ದಕ್ಷನಾಯಕತ್ವ ಅಗತ್ಯವಾಗಿದೆ.

ಸಹಕಾರ ಬ್ಯಾಂಕುಗಳಲ್ಲಿ/ಸಂಘಗಳಲ್ಲಿ ಒಬ್ಬ ವ್ಯವಸ್ಥಾಪಕರಿಂದ ಅಥವಾ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಂದ ಮತ್ತು ಉಪವ್ಯವಸ್ಥಾಪಕರಿಂದ ಗ್ರಾಹಕರು ಅಥವಾ ಸಾರ್ವಜನಿಕರು ಹೆಚ್ಚಿನ ಮಟ್ಟದ ಸೇವೆಯನ್ನು ಮತ್ತು ನಾಯಕತ್ವದ ಗುಣಗಳನ್ನು ನಿರೀಕ್ಷೆ ಮಾಡಿರುತ್ತಾರೆ. ಆದರೆ, ಒಬ್ಬನೇ ನಾಯಕನು ಎಲ್ಲಾ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಿಲ್ಲ. ಉದಾಹರಣೆಗೆ ಬ್ಯಾಂಕನ್ನು ಸ್ವಚ್ಛತೆ ಮಾಡುವ ಸಲುವಾಗಿ ಸಿಪಾಯಿಗಳು ಇರುತ್ತಾರೆ. ಕ್ಯಾಷಿಯರ್ ಹಣಕಾಸು ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಾನೆ. ಚೆಕ್ ಪುಸ್ತಕ, ಪಾಸುಪುಸ್ತಕ ವಿತರಣೆ, ಡಿ.ಡಿ., ಠೇವಣಿ ಪುಸ್ತಕ ಹಾಗೂ ಇತರೆ ಬ್ಯಾಂಕ್ ಕೆಲಸಗಳನ್ನು ನಿರ್ವಹಿಸಲು ಮತ್ತು ಬ್ಯಾಂಕರನ್ನು ಉತ್ತಮ ಸೇವೆಗಳನ್ನು ಗ್ರಾಹಕರಿಗೆ ನೀಡಲು ವಿವಿಧ ವರ್ಗದ ಗುಮಾಸ್ತಗಿರಿಯ ಲೇಖನ ವ್ಯವಹಾರಗಳು ಮತ್ತು ವೃತ್ತಿಪರ ಸೇವೆಗಳು ನಡೆಯುತ್ತಿರುತ್ತವೆ. ಆದರೆ, ಈ ವರ್ಗದ ಎಲ್ಲಾ ವ್ಯಕ್ತಿಗಳನ್ನು ವ್ಯವಸ್ಥಾಪಕರು ಎಂದು ಕರೆಯುವುದಿಲ್ಲ. ಈ ಮೇಲ್ಕಂಡ ವಿವಿಧ ವರ್ಗದ ನೌಕರರ ಕೆಲಸ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವ ಹಾಗೂ ಅವರು ಕಾರ್ಯಪ್ರವೃತ್ತರಾಗುವಂತೆ ಉತ್ತಮ ಮಾರ್ಗದರ್ಶನ ನೀಡುವ ಉತ್ತೇಜನ ನೀಡುವ ವ್ಯಕ್ತಿಯನ್ನು ವ್ಯವಸ್ಥಾಪಕರು ಅಥವಾ ಕಚೇರಿಯ ಸಿಬ್ಬಂದಿಗಳ ನಾಯಕ ಎಂದು ಪರಿಗಣಿಸುತ್ತೇವೆ.

ಗುಜರಾತ್ ರಾಜ್ಯದಲ್ಲಿ ಕೈರಾ ಎಂಬ ಜಿಲ್ಲೆಯ ಆನಂದ್ ಎಂಬ ಹಳ್ಳಿಯಲ್ಲಿ 1946ರಲ್ಲಿ ಪ್ರಾರಂಭವಾಗಿ ಇಂದಿನವರೆಗೂ ಪ್ರಗತಿ ಪಥದಲ್ಲಿ ನಡೆಯುತ್ತಿರುವ "ಅಮೂಲ್" ಎಂಬ ಸಂಸ್ಥೆಗೆ ಕಾರಣಕರ್ತರು ಕ್ಷೀರ ಕ್ರಾಂತಿ ಪಿತಾಮಹಾ ಡಾ॥ ವರ್ಗೀಸ್ ಕುರಿಯನ್, ಇವರು ಜನರ ಮುಂದೆ ನಾಯಕನಾಗಲಿಲ್ಲ, ಬದಲಾಗಿ ಕೃಷಿಕರಿಗೆ, ಕೂಲಿ ಕಾರ್ಮಿಕರಿಗೆ ನಾಯಕತ್ವವನ್ನು ವಹಿಸಿಕೊಡುವುದರ ಮೂಲಕ ಉತ್ತಮ ಮಾರ್ಗದರ್ಶನ ಮಾಡಿ ಹಾಗೂ ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ಹಿತದೃಷ್ಟಿಯಿಂದ ಸರಿ ಎನ್ನುವಂತಹ ವಿಷಯದ ಬಗ್ಗೆ ಅಂತಿಮ ತೀರ್ಮಾನ ತೆಗೆದುಕೊಂಡು ಇದಕ್ಕೆ ಸಂಬಂಧಪಟ್ಟ ಕಾರ್ಯಚಟುವಟಿಕೆಗಳನ್ನು ಅನುಷ್ಠಾನಕ್ಕೆ ತಂದಿದ್ದರ ಪ್ರತಿಫಲವಾಗಿ ಈ ಕ್ಷೇತ್ರಕ್ಕೆ ನಾಯಕನಾಗಿ ಜನಮನದಲ್ಲಿ ಉಳಿದಿದ್ದಾರೆ. ಇಂದಿಗೂ ಸಹಕಾರಿಗಳು ಇವರನ್ನು ಸ್ಮರಣೆ ಮಾಡುತ್ತಾರೆ. ಅಂದರೆ ಅವರ ಬದ್ಧತೆ, ದಕ್ಷತೆಯನ್ನು ಕಾಣಬಹುದಾಗಿದೆ.

ಹೀಗೆ, ನಾಯಕನಾದವನು ಯಾವುದೇ ವ್ಯವಹಾರದಲ್ಲಿ ಬದಲಾವಣೆಗಳನ್ನು ತರುವುದರ ಜೊತೆಗೆ ಅವುಗಳ ಮೌಲ್ಯಗಳು ಆ ಸಂಸ್ಥೆಯಲ್ಲಿ ಆಧಾರಸ್ತಂಭವಾಗಿ ಉಳಿದುಕೊಳ್ಳುವಂತೆ ಮಾಡುತ್ತಾರೆ. ಸಾರ್ಥಕ ಜೀವನದ ಪ್ರಾರಂಭವಾಗುವುದು ಉತ್ತಮ ಜ್ಞಾನದಿಂದ ಮತ್ತು ಕೈಗೊಳ್ಳುವ ತೀರ್ಮಾನದಿಂದ ಮಾತ್ರ ಸಾಧ್ಯ ಎಂಬುದು ಸತ್ಯ ಸಂಗತಿಯಾಗಿ, ಇಂತಹ ನಂಬಿಕಸ್ಥ ನಾಯಕನಿಗಾಗಿ ಸದಸ್ಯರು ಸರ್ವಸ್ವವನ್ನು ತ್ಯಜಿಸಲು ಸಿದ್ಧರಾಗಿರುತ್ತಾರೆ. ಆದರತೆ ನಾಯಕನಿಗೆ ನಿಜವಾದ ಸವಾಲಿರುವುದು ಜನರು ತನ್ನಲ್ಲಿ ನಂಬಿಕೆ ಮತ್ತು ವಿಶ್ವಾಸವಿಡುವಂತೆ ತನ್ನ ಪಾತ್ರ ನಿರ್ವಹಿಸಬೇಕಾಗುತ್ತದೆ ಹಾಗೂ ಸುಖ ಸಂಸಾರಕ್ಕೆ 12 ಸೂತ್ರಗಳು ಇರುವಂತೆ ನಾವೆಲ್ಲರೂ ಉತ್ತಮ ನಾಯಕತ್ವಕ್ಕೆ ಹಲವು ಸೂತ್ರಗಳನ್ನು ಅನುಸರಿಸಬೇಕಾಗಿದೆ.



# ಉತ್ತಮ ನಾಯಕತ್ವಕ್ಕೆ ಹನ್ನೆರಡು ಸೂತ್ರಗಳು




1. ಸಹಕಾರ ಸಂಸ್ಥೆಗಳನ್ನೊಳಗೊಂಡಂತೆ ಯಾವುದೇ ಸಂಸ್ಥೆಯೊಂದರ ಅಭಿವೃದ್ಧಿಗಾಗಿ ನಾಯಕನಾದವನು ನಿರಂತರವಾಗಿ ಶ್ರಮಿಸುತ್ತ ಜೊತೆಗಿರುವ ಎಲ್ಲರಿಗೂ ಪ್ರೇರೇಪಣೆ ಮಾಡುವುದು ಮತ್ತು ಶಕ್ತಿ ಮೀರಿ ಬುದ್ಧಿವಂತಿಕೆಯಿಂದ ಮಾನವ ಸಂಪತ್ತನ್ನು ಸದ್ಬಳಕೆ ಮಾಡಿಕೊಂಡು ಗರಿಷ್ಠಮಟ್ಟದ ಲಾಭ ಪಡೆದುಕೊಳ್ಳುವ ಎಚ್ಚೆತ್ತ, ಚೈತನ್ಯದಾಯಕ, ಕ್ರಿಯಾಶೀಲರಾದ ನಾಯಕತ್ವವನ್ನು ಬೆಳೆಸಿಕೊಳ್ಳುವ ವೃತಿಪರತೆ ಇರಬೇಕು.
2. ಇಂದಿನ ಸ್ಪರ್ಧಾತ್ಮಕ ಪೈಪೋಟಿಯ ಜಗತ್ತಿನಲ್ಲಿ ಬದಲಾಗುತ್ತಿರುವ ಸಹಕಾರ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆ ತರಲು ನಾಯಕನಾದವನು ಬದ್ಧನಾಗಿರಬೇಕು, ತೆಗೆದುಕೊಂಡ ತೀರ್ಮಾನಗಳು ಸ್ಥಿರ ಕಾಲ ಉಳಿಯುವಂತಾಗಿ ಸಂಸ್ಥೆಯಲ್ಲಿ ದುಡಿಯುವ ಎಲ್ಲರಿಗೂ ಉಪಯುಕ್ತವಾಗಿರಬೇಕು.
3. ಸಂಸ್ಥೆಯ ಮುಂದಾಳು ಯಾವುದೇ ಗುರಿ ಮುಟ್ಟಲು ಕಷ್ಟವೆನಿಸಿದಾಗ ಆತ್ಮ ವಿಶ್ವಾಸದಿಂದ ಉತ್ತಮ ಕಲ್ಪನೆಯೊಂದಿಗೆ ಇಷ್ಟಪಟ್ಟು ಕರ್ತವ್ಯ ನಿರ್ವಹಿಸಿದರೆ ಸಾಧನೆ ಎಂಬ ಪ್ರಗತಿ ಪಥದಲ್ಲಿ ಮುನ್ನಡೆಯಲು ಸಾಧ್ಯವಾಗುವಂತಹ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು ಮತ್ತು ಗುಣಾತ್ಮಕವಾದ ಆಡಳಿತವನ್ನು ಅನುಷ್ಠಾನಕ್ಕೆ ತರುವ ವ್ಯಕ್ತಿಯಾಗಿರಬೇಕು.
4. ಮುಂದಾಳು ಎಲ್ಲಾ ಕೆಲಸಗಳನ್ನು ತಮ್ಮ ತಲೆಯ ಮೇಲೆ ಹಾಕಿ ಕೊಳ್ಳದೆ ಅಧೀನ ಸಿಬ್ಬಂದಿಗಳಿಗೆ ಕರ್ತವ್ಯ – ಜವಾಬ್ದಾರಿಗಳನ್ನು ಹಂಚಿ, ಉತ್ತಮ ಭೌದ್ಧಿಕ ಸಾಮರ್ಥ್ಯದ ಮೂಲಕ ಕ್ರಮಬದ್ಧವಾಗಿ ಪರಿವೀಕ್ಷಣೆ ಮಾಡಿ ಉತ್ತಮ ಫಲಿತಾಂಶ ಪಡೆದುಕೊಳ್ಳುವಂತಾಗಬೇಕು.
5. ಸಹಕಾರಿ ನಾಯಕನು ಸಹಕಾರಿ ಕಾಯ್ದೆ, ನಿಯಮ, ಉಪನಿಯಮ, ಸಿಬ್ಬಂದಿಗಳ ಸೇವಾ ಪೂರಕ ನಿಯಮಗಳ ಬಗ್ಗೆ ಪರಿಪೂರ್ಣವಾಗಿ ತಿಳಿದಿರಬೇಕು. ಇತ್ತೀಚಿನ ಕಾಯ್ದೆ–ನಿಯಮಗಳ ತಿದ್ದುಪಡಿ ಅಂಶಗಳ ಬಗ್ಗೆ ಅಪಡೇಟ್ ಇರಬೇಕು, ಕಲಿತಿರುವುದನ್ನು ಇತರರಿಗೇ ತಿಳಿಸುವ ಕೌಶಲ್ಯತೆ ಇರಬೇಕು.
6. ಮುಂದಾಳು ವಿವಿಧ ರೀತಿಯ ತರಬೇತಿಗಳಲ್ಲಿ ಭಾಗವಹಿಸಬೇಕು, ಅರಿವಿಲ್ಲದ ಜ್ಞಾನವನ್ನು ಬುದ್ಧಿವಂತಿಕೆವುಳ್ಳ ನುರಿತ ತಜ್ಞರಿಂದ ಕಲಿಯುಂತಹ ವ್ಯಕ್ತಿಯಾಗಿರಬೇಕು. ಹಾಗೂ ನಾಲಿಗೆ ಸರಿ ಇದ್ದರೆ ನಾಡೆಲ್ಲ ಒಳ್ಳೆಯದು ಎನ್ನುವಂತೆ ಉತ್ತಮ ವಾಕ್ ಚಾತುರ್ಯದಿಂದ ಯೋಗ್ಯವಾದ ನಾಯಕತ್ವ ದೊರಕುತ್ತದೆ ಎಂಬ ಪರಿಕಲ್ಪನೆಯನ್ನು ತಿಳಿದುಕೊಂಡಿರುವ ಸ್ಥಾನ ನಾಯಕನದಾಗಿರಬೇಕು.
7. ತಾಳ್ಮೆ–ಸಹನೆ, ತ್ಯಾಗ, ಕಹಿಯಾದ ಕಾಯ್ಗಿಗಳಿದ್ದಂತೆ. ಆದರೆ, ಅದು ಹಣ್ಣಾದಾಗ ತಿನ್ನಲು ಸಿಹಿಯಾಗಿರುವಂತೆ, ಕಷ್ಟಗಳು ಬಂದಾಗ ಸ್ಪರ್ಧಾತ್ಮಕವಾಗಿ ಎದುರಿಸುವ ಗುಣವನ್ನು ನಾಯಕನಾದವನು ಹೊಂದಿರಬೇಕು. ಸದ್ಗುಣ ಯಾವತ್ತು ಒಂಟಿಯಲ್ಲ. ಸದ್ಗುಣಿಯಾದವನಿಗೆ ಯೋಗ್ಯ ಮಿತ್ರರು ಬರುತ್ತಾರೆ. ಆದ್ದರಿಂದ ಸದ್ಗುಣದ ಜೊತೆಗೆ ಕರ್ತವ್ಯ ನಿರ್ವಹಿಸುವಂತಹ ವ್ಯಕ್ತಿಯಾದರೆ ಹೆಚ್ಚಿನ ಸಹೋದ್ಯೋಗಿಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.
8. ನಾಯಕನು ಸಹದ್ಯೋಗಿಗಳ ಮನಃಸ್ಥಿತಿಯನ್ನು ತಿಳಿದುಕೊಂಡು ಕೆಲಸ ಮಾಡುವಾಗ ಯಾವುದೇ ಸಮಸ್ಯೆ ಉದ್ಭವವಾದರೆ ಸಮರ್ಥ, ಪರಿಪೂರ್ಣವಾದ ಉತ್ತರ ನೀಡುವುದರ ಮೂಲಕ ತಪ್ಪುಗಳನ್ನು ಸಹನೆಯಿಂದ ತಿದ್ದುವ ವ್ಯಕ್ತಿಯಾಗಿರಬೇಕು.
9. ನಾಯಕನಾದವನು ತನ್ನ ವಯಕ್ತಿಕ ಸಾಧನೆಗಳ ಬಗ್ಗೆ ತೃಪ್ತಿ ಹೊಂದಿರಬೇಕು. ಆಡಳಿತ ಮಂಡಳಿ ಬಗ್ಗೆ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಸಿಬ್ಬಂದಿಗಳ ಗುಣನಡತೆ, ಕಾರ್ಯದಕ್ಷತೆ ಬಗ್ಗೆ, ಸದಸ್ಯರು ಮತ್ತು ಸಾರ್ವಜನಿಕರ ಬಗ್ಗೆ ಸಂಪೂರ್ಣ ತಿಳಿದುಕೊಂಡು ಉತ್ತಮವಾಗಿ ಕಾರ್ಯ ನಿರ್ವಹಿಸುವವರನ್ನು ಗೌರವಿಸುವ, ಸ್ಫೂರ್ತಿ ತುಂಬುವ, ಬಡ್ತಿ ನೀಡುವ ಗುಣಧರ್ಮವಿರಬೇಕು.
10. ಮುಂದಾಳು ಎಷ್ಟೇ ಎತ್ತರಕ್ಕೆ ಬೆಳೆಯುತ್ತಿದ್ದರೂ ಪ್ರತಿದಿನವು ಕಛೇರಿಗೆ ಭೇಟಿ ನೀಡುವಾಗ ನಾನು ಕಲಿಯುವುದು ಇನ್ನೂ ಇದೆ ಎಂದು ತೀರ್ಮಾನಿಸಿ ತನ್ನಲಿರುವ ಲೋಪದೋಷಗಳನ್ನು ಸರಿಪಡಿಸಿಕೊಳ್ಳುವ ಮನೋಭಾವವಿರಬೇಕು.

ಉದಾ : ಆಡಳಿತ ಧರ್ಮ (Good Governances) ಅನುಪಾಲನೆಯ ವ್ಯಕ್ತಿತ್ವ ವಿಕಸನವನ್ನು ಮಾಡಿಕೊಳ್ಳಬೇಕಾದ ಸೂತ್ರಗಳಾದ

- Transparency in decision making
  ನಿರ್ಧಾರ ಮತ್ತು ಕಾರ್ಯಗಳಲ್ಲಿ ಪಾರದರ್ಶಕತೆ
- A accountability for deeds
  ಕೆಲಸಗಳ ಪರಿಣಾಮಗಳಲ್ಲಿ ಜವಾಬ್ದಾರಿ



- All members active participation
  ಎಲ್ಲಾ ಸದಸ್ಯರು ಸಕ್ರಿಯವಾಗಿ ಭಾಗವಹಿಸುವಿಕೆ
- Social commitment and involvement
  ಸಾಮಾಜಿಕ ಬದ್ಧತೆ ಮತ್ತು ತಲ್ಲೀನತೆ

ಮುಂತಾದ ವಿಷಯಗಳ ಬಗ್ಗೆ ನಾಯಕನಾದವನು ತಿಳಿದಿರಬೇಕು.

11. ಬದಲಾಗುತ್ತಿರುವ ಪರಿಸ್ಥಿತಿಗಳಿಗೆ ಅನುಗುಣವಾಗಿ ನಾಯಕನೇ ಹೊಸ ಹೊಸ ವಿಷಯಗಳನ್ನು, ಸೂಕ್ಷ್ಮತೆಯನ್ನು ಕಲಿಯುವಂತಾಗಬೇಕು. ಪ್ರತಿಸ್ಪರ್ಧಿಗಳ ಬಗ್ಗೆ ನಿರಂತರ ಎಚ್ಚರಿಕೆ ಇರಬೇಕು. ನಾಯಕನ ಮುಂದೆ ಬರಬಹುದಾದ ಪ್ರಶ್ನೆಗಳಿಗೆ ಇಂದೇ ಸರಿ ಉತ್ತರ ಸಿದ್ದಪಡಿಸಿಕೊಂಡಿರಬೇಕು.
12. ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಕೊಳ್ಳುವುದು, ಕೆಲವು ತಾಂತ್ರಿಕ ಸಮಸ್ಯೆಗಳಿಗೆ ಉತ್ತರ ದೊರಕದಿದ್ದಾಗ ಬುದ್ದಿವಂತಿಕೆ ಸಲಹೆಗಳನ್ನು ಪಡೆದುಕೊಳ್ಳುವ ಬಗ್ಗೆ ಜಾಣ್ಮೆ ಇರಬೇಕು. ಸಂಪನ್ಮೂಲಗಳ ಕ್ರೋಢೀಕರಿಸುವ ವೈಜ್ಞಾನಿಕತೆ ಮುಂತಾದ ಅಂಶಗಳನ್ನು ಅಳವಡಿಸಿಕೊಂಡು ಕಾರ್ಯ ರೂಪಕ್ಕೆ ತರುವ ದಕ್ಷ ನಾಯಕತ್ವವಿರಬೇಕು.

ಇಂದು ಜನರು ನಿರಂತರವಾಗಿ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ತಿಳಿದುಕೊಂಡು ಜೀವನ ಸಾಗಿಸುತ್ತಿದ್ದಾರೆ. ದೇಶದಲ್ಲಿ ನಿರಂತರವಾಗಿರುವ ಸಮಸ್ಯೆಗಳಾದ ಜಿ.ಡಿ.ಪಿ., ಬಿ.ಪಿ.ಎಲ್, ನಿರುದ್ಯೋಗ, ಬಡತನ, ಅಸಮಾನತೆ ಮತ್ತು ಲಂಚ ಸ್ವೀಕರಿಸುವುದು ಮುಂತಾದ ಸಮಸ್ಯೆಗಳನ್ನು ಸರ್ಕಾರ ಪರಿಹರಿಸಲು ನಿರಂತರವಾಗಿ ಪ್ರಯತ್ನಿಸುತ್ತಿದೆ. ಇಂದು ಭಾರತದಲ್ಲಿ ಸುಮಾರು 142 ಕೋಟಿಗೂ ಅಧಿಕವಾಗಿರುವ ಜನಸಂಖ್ಯೆಯಲ್ಲಿ ಜನರು ಎದುರಿಸುತ್ತಿರುವ ಬಹುತೇಕ ಸಮಸ್ಯೆಗಳನ್ನು ಸರ್ಕಾರ ಒಂದೇ ಬಗೆಹರಿಸಲು ಸಾಧ್ಯವಿಲ್ಲ. ಆದ್ದರಿಂದ ಖಾಸಗಿ ಕ್ಷೇತ್ರವು ಸಹ ಹಲವಾರು ಸಂಕಷ್ಟ-ಸಮಸ್ಯೆಗಳಿಗೆ ಪರಿಹಾರ ನೀಡುತ್ತಾ ಬಂದಿದೆ.

**ಈ ಹಿನ್ನಲೆಯಲ್ಲಿ ಭಾರತ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ವಲಯದ ಪಾಲು ಇರುವುದರಿಂದ ಸಹಕಾರ ಕ್ಷೇತ್ರಕ್ಕೆ ಹಲವಾರು ಸವಾಲುಗಳನ್ನು ಎದುರಿಸುವ ಶಕ್ತಿ ಇದೆ ಎಂಬುದನ್ನು ಈಗಾಗಲೇ ಪರಿಗಣಿಸಲಾಗಿದೆ. ಉದಾಹರಣೆಗೆ ಕೋವಿಡ್ 2019ರ ಸಂದರ್ಭದಲ್ಲಿ ಜನರು ನಿರ್ಭೀತಿಯಿಂದ ಭಯಪಡುವ ವ್ಯವಸ್ಥೆಯೊಂದಿಗೆ ಇದ್ದಂತ ಸಂದರ್ಭದಲ್ಲಿ ಇಫ್ಕೋ, ಕ್ರಿಭ್ಕೋ, ಅಮೂಲ್, ಕೆ.ಎಂ.ಎಫ್ ಮತ್ತು ಸಾರಸ್ವತ ಕೋ-ಆಪರೇಟಿವ್ ಬ್ಯಾಂಕ್, ರಾಜ್ಯದ ವಿವಿಧ ಪ್ರಮುಖ ಸಹಕಾರ ಸಂಘಗಳು/ಬ್ಯಾಂಕುಗಳು ಹಾಗೂ ಸಹಕಾರ ಆಸ್ಪತ್ರೆಗಳು ನಾಯಕತ್ವವನ್ನು ವಹಿಸಿ, ಯಶಸ್ವಿ ಕಾರ್ಯಗಳನ್ನು ನಿರ್ವಹಿಸಿವೆ.**

**ಸಹಕಾರ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರ ಸ್ಮರಣೆ ಮಾಡಿಕೊಳ್ಳುವುದು ನಮ್ಮೆಲರ ಕರ್ತವ್ಯವಾಗಿದೆ. ಪ್ರಪಂಚದ ಸಹಕಾರ ಚಳವಳಿ ಪಿತಾಮಹಾ ರಾಬರ್ಟ್ ಓವೆನ್, ಭಾರತ ದೇಶದ ಸಹಕಾರ ಕ್ಷೇತ್ರದ ಪಿತಾಮಹ ಸಿದ್ಧನಗೌಡ ಸಂಣರಾಮನಗೌಡ ಪಾಟೀಲ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಭಾರತದ ಪ್ರಥಮ ಪ್ರಧಾನಿ ಪಂಡಿತ ಜವಾಹಾರಲಾಲ್ ನೆಹರು ಮತ್ತು ಶ್ವೇತಕಾಂತ್ರಿಯ ಹರಿಕಾರ ದಿ॥ ಡಾ. ವರ್ಗೀಸ್‌ಕುರಿಯನ್ ಹಾಗೂ ಹಸಿರು ಕ್ರಾಂತಿಯ ಹರಿಕಾರ ಡಾ. ಎಂ.ಎಸ್. ಸ್ವಾಮಿನಾಥನ್ ಮುಂತಾದವರು ಸಹಕಾರ ಕ್ಷೇತ್ರದ ಉತ್ತಮ ನಾಯಕತ್ವಕ್ಕೆ ಆದರ್ಶ ವ್ಯಕ್ತಿಗಳಾಗಿದ್ದಾರೆ ಎನ್ನುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ.**

IFFCO

KRIBHCO
Cooperative and beyond...

Amul

A MILK BRAND
Nandini
TRUSTED BY MILLIONS

Saraswat Bank
100 Years Young
Saraswat Co-operative Bank Ltd.
(Scheduled Bank)